ಅನುದಿನಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ



ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ತುಮಕೂರಿನ ಸಿದ್ದಗಂಗಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಅಮೃತಾ ದೇವಿ ಬಿಷ್ಣೋಯಿ ಅವರ ಸ್ಮರಣಾರ್ಥ "ಅಮೃತ ಪ್ರಕೃತಿ ವಂದನಾ ಮಹೋತ್ಸವ" ದಲ್ಲಿ ಪಾಲ್ಗೊಂಡು ಪರಿಸರ ಸಂರಕ್ಷಣೆಗೆ ಅವರು ನೀಡಿದ ಕೊಡುಗೆಗಳನ್ನು ಸ್ಮರಿಸಿದರು.

ಸಂಪುಟ : 46 | ಸಂಚಿಕೆ : 10 | ಶ್ರಾವಣ–ಭಾದ್ರಪದ | ಕಲಿಯುಗಾಬ್ದ 5126 | 15–09–2024 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

# ಲೋಕಮಾತಾ ಅಹಲ್ಯಾಬಾಯಿ ಹೋಳ್ಕರ್ ತ್ರಿಶತಾಬ್ದಿ ವರ್ಷ

ಅಹಲ್ಯಾಬಾಯಿ ಹೋಳ್ಕರ್ (31 ಮೇ 1725–13 ಆಗಸ್ಟ್ 1795) ರಾಷ್ಟ್ರಕಂಡ ಅಪ್ರತಿಮ ರಾಣಿ. ಅದ್ಭುತ ಆಡಳಿತಗಾರ್ತಿಯಾಗಿ, ಅಗಣಿತ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು, ಆಕ್ರಮಣಕಾರರ ದಾಳಿಗೆ ಒಳಗಾದ ನೂರಾರು ದೇವಾಲಯಗಳ ಜೀರ್ಣೋದ್ಧಾರ ಮತ್ತು ನೂತನ ದೇವಾಲಯಗಳ ನಿರ್ಮಾಣದ ಮೂಲಕ ಧಾರ್ಮಿಕ ಪುನರುತ್ಥಾನಕ್ಕೆ ಕಾರಣೀಭೂತರಾದ 'ಲೋಕಮಾತೆ'. ಈ ವರ್ಷ ಅವರ 300ನೇ ವರ್ಷದ ಜಯಂತಿಯ ಪ್ರಯುಕ್ತ ರಾಷ್ಟ್ರಾದ್ಯಂತ ಅವರ ಸಂಸ್ಮರಣಾರ್ಥ ವಿವಿಧ ಕಾರ್ಯಕ್ರಮಗಳು ನಡೆಯಲಿವೆ.

ಅಹಲ್ಯಾ ಹುಟ್ಟಿದ್ದು ಮಹಾರಾಷ್ಟ್ರದ ಚೌಂಡಿ ಎಂಬ ಹಳ್ಳಿಯಲ್ಲಿ. ಅವರ ತಂದೆ ಮಂಕೋಜಿ ಶಿಂಧೆ ಆ ಪ್ರದೇಶದ ಪಾಟೀಲರಾಗಿದ್ದರು, ತಾಯಿ ಸುಶೀಲಾದೇವಿ ಕುಶಲ ಗೃಹಿಣಿ ಮತ್ತು ದೈವಭಕ್ತೆಯಾಗಿದ್ದರು. ಇತಿಹಾಸ ಪ್ರಸಿದ್ಧ ಸುಬೇದಾರ್ ಮಲ್ಹಾರರಾವ್ ಅವರ ಮಗ ಖಂಡೇರಾವ್‌ನೊಂದಿಗೆ 1737ರಲ್ಲಿ 12ನೇ ವಯಸ್ಸಿನಲ್ಲಿ ಅಹಲ್ಯಾ ವಿವಾಹ ನಡೆಯಿತು. ಮರಾಠಾ ಪೇಶ್ವೆಗಳ ಸಾಮಂತನಾಗಿದ್ದ ಮಲ್ಹಾರರಾವ್ 30 ಪರಗಣ ವ್ಯಾಪ್ತಿಯ ಪ್ರಾಂತ್ಯದ ಸುಬೇದಾರನಾಗಿ ಅಂದಾಜು 7 ಲಕ್ಷ ರೂ. ಆದಾಯ ಹೊಂದಿದ್ದರು. 1741ರಲ್ಲಿ ಮಲ್ಹಾರ್ ರಾವ್ ಇಂದೋರ್‌ನಲ್ಲಿ ಅರಮನೆ ಕಟ್ಟಿಸಿ, ವ್ಯಾಪಾರ ವಹಿವಾಟು ಕೇಂದ್ರವಾಗಿ ಬೆಳೆಸಿದರು. ಇಂದ್ರಪುರಿ ಎಂಬ ಸಣ್ಣ ಪಟ್ಟಣ, ಇವತ್ತಿನ ಸಂಪದ್ಭರಿತ ಇಂದೋರ್ ನಗರವಾಗಿ ಬೆಳೆಯಲು ಬೀಜಾಂಕುರವಾಗಿದ್ದು ಹೀಗೆ. ಮರಾಠಾ ಸಾಮ್ರಾಜ್ಯದ ಪರವಾಗಿ ಪತಿ ಹಾಗೂ ಮಾವ ನಿರಂತರ ಯುದ್ಧಗಳಲ್ಲಿ ಪಾಲ್ಗೊಳ್ಳುತ್ತಿದ್ದ ಕಾರಣ ಇಂದೋರ್‌ನ ಆಡಳಿತ ನೋಡಿಕೊಳ್ಳುವ ಹೊಣೆ ಅಹಲ್ಯಾಬಾಯಿ ಹೆಗಲೇರಿತ್ತು.

1754ರಲ್ಲಿ ಭರತಪುರ ಜಾಟ ರಾಜ್ಯದ ಕುಂಭರ್ ಕೋಟೆಗೆ ಮುತ್ತಿಗೆ ಹಾಕಿದಾಗ ಆಕಸ್ಮಿಕವಾಗಿ ಸಿಡಿಮದ್ದು ಬಡಿದು ಖಂಡೇರಾವ್ ಕೊನೆಯುಸಿರೆಳೆದನು. ಪತಿಯ ಅಕಾಲಮರಣದಿಂದ ಬದುಕುವ ಆಸೆಯನ್ನೇ ಕಳೆದುಕೊಂಡ ಅಹಲ್ಯಾ ಸಹಗಮನಗೈಯಲು ನಿರ್ಧರಿಸಿದ ಸಂದರ್ಭದಲ್ಲಿ ಮಾವ ಮಲ್ಹಾರ್ ರಾವ್ ಅಹಲ್ಯಾ ಕಾಲಿಗೆ ಬಿದ್ದು ಸಾಮ್ರಾಜ್ಯ ಅನಾಥವಾಗುತ್ತದೆ ಎಂದು ಕಣ್ಣೀರುಗರೆದರು. ಬಳಿಕ ಅಹಲ್ಯಾ ನಿರ್ಧಾರ ಬದಲಿಸಬೇಕಾಯಿತು. ಮಾವ ಮಲ್ಹಾರ್ ರಾವ್ ಮಾರ್ಗದರ್ಶನದಲ್ಲಿ ಆಡಳಿತ, ಯುದ್ಧ ಮತ್ತು ರಾಜತಾಂತ್ರಿಕ ವ್ಯವಹಾರಗಳಲ್ಲಿ ಪಳಗಿದ ಅಹಲ್ಯಾ, 1765ರಲ್ಲಿ ಮಾವ ದೆಹಲಿಯಲ್ಲಿ ಆಕ್ರಮಣಕಾರ ಅಬ್ದಾಲಿ ಸೈನ್ಯದ ವಿರುದ್ಧ ಹೋರಾಡುತ್ತಿದ್ದಾಗ, ಗ್ವಾಲಿಯರ್ ಸಮೀಪದ ಗೋಹಡ್ ಕೋಟೆಯನ್ನು ವಶಪಡಿಸಿಕೊಂಡರು. ಗ್ವಾಲಿಯರ್ ವಶವಾಗಿದ್ದರಿಂದಾಗಿ ಮಧ್ಯಪ್ರದೇಶ ಭಾಗಪೂರ್ಣ ಹೋಳ್ಕರ್ ಆಡಳಿತಕ್ಕೊಳಪಟ್ಟಿತು. 1766ರಲ್ಲಿ ಮಲ್ಹಾರ್ ರಾವ್ ವಿಧಿವಶರಾದರು. ಅದಾದ ಎಂಟೇ ತಿಂಗಳಲ್ಲಿ ಮಗ ಮಾಲೋಜಿ ಸಹ ಮರಣಿಸಿದಾಗ ರಾಜ್ಯವಾಳುವುದಕ್ಕೆ ದತ್ತು ಸ್ವೀಕಾರದ ಬದಲು ಪೇಶ್ವೆಗಳ ಅನುಮತಿ ಪಡೆದು ಹೋಳ್ಕರ್ ಪ್ರಾಂತ್ಯದ ಆಡಳಿತ ಚುಕ್ಕಾಣಿ ಕೈಗೆತ್ತಿಕೊಂಡರು. ಅಹಲ್ಯಾ ರಾಣಿಯಾದಾಗ ಚಂದ್ರಾವತದ ಮುಖ್ಯರು ಬಂಡೆದ್ದರು. ಅವರೆಲ್ಲರನ್ನೂ ಕ್ಷಮಿಸಿದ ಅಹಲ್ಯಾ 31 ಗ್ರಾಮಗಳನ್ನು ಬಿಟ್ಟುಕೊಟ್ಟರು. ಆದರೆ, ಮತ್ತೊಮ್ಮೆ ಬಂಡೆದ್ದಾಗ ಸೈನ್ಯ ಕಳಿಸಿ ಸದ್ದಡಗಿಸಿದರು. ಬಂಡಾಯದ ನೇತೃತ್ವ ವಹಿಸಿದ್ದವರ ತಲೆದಂಡ ಪಡೆಯುವ ಎಲ್ಲ ಅವಕಾಶ ಇದ್ದರೂ, ಅಹಲ್ಯಾ ಹಾಗೆ ಮಾಡದೆ ಬಂಡುಕೋರರನ್ನು ಕ್ಷಮಿಸಿ ರಾಜಮರ್ಯಾದೆಯೊಂದಿಗೆ ಕಳಿಸಿಕೊಟ್ಟರು.

**ಕೊಡುಗೆ:** ಅಹಲ್ಯಾಬಾಯಿ ತನ್ನ ವೈಯಕ್ತಿಕ ಹಣದಿಂದ ಭಾರತದಾದ್ಯಂತ ಪ್ರಸಿದ್ಧ ದೇವಾಲಯಗಳನ್ನು ನಿರ್ಮಿಸಿದರು. ವಿವಿಧ ಸ್ಥಳಗಳಲ್ಲಿ ಅನ್ನದಾಸೋಹದ ಕೇಂದ್ರಗಳನ್ನು ತೆರೆದಳು. ಜನರಿಗಾಗಿ ಮೆಟ್ಟಿಲುಬಾವಿ ಮತ್ತು ಕೆರೆಗಳನ್ನು ನಿರ್ಮಿಸಿದರು. ದೇವಾಲಯಗಳಲ್ಲಿ ಶಾಸ್ತ್ರಶ್ರವಣ ಮತ್ತು ಧರ್ಮಗ್ರಂಥಗಳ ಪ್ರವಚನಕ್ಕಾಗಿ ವಿದ್ವಾಂಸರನ್ನು ನೇಮಿಸಿದರು. ಅಹಲ್ಯಾಬಾಯಿ ಸಮಕಾಲೀನರಾಗಿದ್ದ ಪುಣೆಯ ನ್ಯಾಯಾಧೀಶ ರಾಮ್ ಶಾಸ್ತ್ರ ಮತ್ತು ಝಾನ್ಸಿಯ ರಾಣಿ ಲಕ್ಷ್ಮೀಬಾಯಿ ಈಕೆಯ ಪರಂಪರೆಯನ್ನು ಅನುಸರಿಸಿದರು. ಜನರು ತಮ್ಮ ಮನಸ್ಸಿನಲ್ಲಿ ಈಕೆಗೆ ದೇವತೆಯ ಸ್ಥಾನಮಾನವನ್ನು ನೀಡಿದ್ದರು. ಈಕೆಯೂ ತನ್ನ ಪ್ರಜೆಗಳನ್ನು ಮಕ್ಕಳಂತೆ ಕಂಡರು. 28 ವರ್ಷಗಳ ಕಾಲ ಹೋಳ್ಕರ್‌ರಿಂದ ರಾಜ್ಯಕ್ಕೆ ನಿರಂತರ, ಉತ್ತಮ, ನ್ಯಾಯಪರ ಆಡಳಿತ ಸಿಕ್ಕಿತ್ತು. ಎಲ್ಲರೊಂದಿಗೆ ಈಕೆಯ ಜೀವನವು ಸ್ನೇಹಮಯಿ ಮತ್ತು ಆದರ್ಶದಿಂದ ಕೂಡಿತ್ತು.



**ವಿಧವಾ ಮಹಿಳೆಯರಿಗಾಗಿ ಕೈಗೊಂಡ ಕೆಲಸಗಳು:** ಅಹಲ್ಯಾಬಾಯಿಯು ವಿನಮ್ರ ಮತ್ತು ಉದಾರ ಆಡಳಿತಗಾರ್ತಿಯಾಗಿದ್ದರು. ಇವರು ಬಡ ಮತ್ತು ಅಸಹಾಯಕ ಜನರ ಬಗ್ಗೆ ಸಹಾನುಭೂತಿ ಮತ್ತು ಪರೋಪಕಾರದ ಮನೋಭಾವನೆಯನ್ನು ಹೊಂದಿದ್ದರು. ಸಮಾಜದ ಹಿತಕ್ಕಾಗಿ ಸಮರ್ಪಿತಳಾದ ಅಹಲ್ಯಾಬಾಯಿ ಯಾವಾಗಲೂ ತನ್ನ ಪ್ರಜೆಗಳ ಮತ್ತು ಬಡವರ ಹಿತದ ಬಗ್ಗೆ ಯೋಚಿಸುತ್ತಿದ್ದರು. ಬಡವರಿಗೆ ಸಾಧ್ಯವಿರುವ ಎಲ್ಲಾ ಸಹಾಯವನ್ನು ನೀಡಲು ಸಿದ್ಧರಾಗಿರುತ್ತಿದ್ದರು. ಸಮಾಜದಲ್ಲಿ ವಿಧವೆ ಮಹಿಳೆಯರ ಸ್ಥಾನಮಾನದ ಸುಧಾರಣೆಗಾಗಿ ಕೆಲಸ ಮಾಡಿದಳು ಮತ್ತು ಆಡಳಿತವನ್ನು ವಹಿಸಿಕೊಂಡ ನಂತರ ಮಹಿಳೆಯರಿಗಾಗಿ ಇದ್ದ ಕಾನೂನಿನಲ್ಲಿ ಬದಲಾವಣೆಗಳನ್ನು ಮಾಡಿದರು. ಮಕ್ಕಳಿಲ್ಲದ ವಿಧವಾ ಮಹಿಳೆಯರ ಆಸ್ತಿಯನ್ನು ರಾಜ್ಯಾಡಳಿತವು ಸ್ವಾಧೀನಪಡಿಸಿಕೊಳ್ಳುವ ಕಾನೂನನ್ನು ತೆಗೆದುಹಾಕಿ, ವಿಧವಾ ಮಹಿಳೆಯರಿಗೆ ಅವರ ಆಸ್ತಿಯನ್ನು ಪುನಃ ನೀಡಲಾಯಿತು. ಅಹಲ್ಯಾಬಾಯಿಯು ಮಹಿಳೆಯರಿಗೆ ಶಿಕ್ಷಣದ ಹಕ್ಕನ್ನು ನೀಡಿದರು. ವಿಧವೆಯರ ಮರುವಿವಾಹವನ್ನೂ ಪ್ರಾರಂಭಿಸಿದಳು. ಸರ್ವಪ್ರಥಮವಾಗಿ ತನ್ನ ಸ್ನೇಹಿತೆಯಾಗಿದ್ದ ರೇಣುಕಾಳ ಪುನರ್ವಿವಾಹ ಮಾಡಿಸಿದರು.

**ಕುಶಲ ಆಡಳಿತಗಾರ್ತಿ:** ಅಹಲ್ಯಾಬಾಯಿ ತನ್ನ 30 ವರ್ಷಗಳ ಆಳ್ವಿಕೆಯಲ್ಲಿ ಇಂದೋರನ್ನು ಸಮೃದ್ಧ ಮತ್ತು ವಿಕಸಿತ ನಗರವನ್ನಾಗಿ ಮಾಡುವಲ್ಲಿ ಪ್ರಮುಖ ಪಾತ್ರವಹಿಸಿದರು. ಇವರು ಇಂದೋರ್‌ನಲ್ಲಿ ರಸ್ತೆಗಳ ಮತ್ತು ಬಡವರ ಸ್ಥಿತಿಯನ್ನು ಸುಧಾರಿಸಲು ಶ್ರಮಿಸಿದರು ಹಾಗೂ ಶಿಕ್ಷಣಕ್ಕೆ ಮಹತ್ವ ನೀಡಿದರು. ಅಹಲ್ಯಾಬಾಯಿಯ ಶ್ರಮದಿಂದ ಇಂದಿಗೂ ಇಂದೋರ್ ಭಾರತದ ಶ್ರೀಮಂತ ಮತ್ತು ವಿಕಸಿತ ನಗರವೆಂದೇ ಗುರುತಿಸಲಾಗುತ್ತದೆ. ಇಂದೋರನ್ನು ವಾಣಿಜ್ಯ ಕೇಂದ್ರವಾಗಿ ಮಾಡುವ ದೃಷ್ಟಿಯಿಂದ ಮಹತ್ವದ ಕಾರ್ಯವನ್ನು ಕೈಗೊಂಡರು. ಅಹಲ್ಯಾಬಾಯಿ ಇಂದೋರನ್ನು ರಾಜ್ಯದ ಸೈನಿಕ ಕೇಂದ್ರವನ್ನಾಗಿ ಮಾಡಿದರು. 700 ವರ್ಷದಷ್ಟು ಪುರಾತನ ಇಂದ್ರೇಶ್ವರ ಮಂದಿರ (ಪಂಢರಿನಾಥ ಮಂದಿರದ ಹಿಂಭಾಗ) ಇಂದೋರ್‌ನಲ್ಲಿತ್ತು. 1741ರಲ್ಲಿ ಈ ಮಂದಿರದ ಜೀರ್ಣೋದ್ಧಾರವನ್ನು ಮಲ್ಹಾರರಾವ್ ಹೋಳ್ಕರ್ ಮಾಡಿದ್ದರು. ಇಂದೋರನ ಮೊದಲ ಹೆಸರು ಇಂದ್ರಪುರಿ, ನಂತರದಲ್ಲಿ ಇಂದ್ರಪುರ. ಮಲ್ಹಾರರಾವ್ ಹೋಳ್ಕರ್ ತನ್ನ ಆಡಳಿತ ಕಾಲದಲ್ಲಿ ಇಂದೂರ್ ಎಂದೂ, 1818ರಲ್ಲಿ ಪೂರ್ಣ ಭಾರತದ ಮೇಲೆ ಆಂಗ್ಲರು ಆಕ್ರಮಿಸಿಕೊಂಡಾಗ ಇಂದೋರ್ ಆಯಿತು. ಇಂದೋರ್‌ನ ದಕ್ಷಿಣದಲ್ಲಿ ಓಂಕಾರೇಶ್ವರ ಮತ್ತು ಉತ್ತರದಲ್ಲಿ ಮಹಾಂಕಾಲೇಶ್ವರ ಹಾಗೂ ಮಧ್ಯದಲ್ಲಿ ಇಂದ್ರೇಶ್ವರ ಮಂದಿರಗಳಿವೆ. ಗಯಾದಿಂದ ರಾಮೇಶ್ವರದವರೆಗೆ ಅಹಲ್ಯಾಬಾಯಿ ಹೋಳ್ಕರ್ ನಿರ್ಮಿಸಿದ ರಸ್ತೆಯನ್ನು ಇಂದು ಗ್ರಾಂಡ್ ಟ್ರಂಕ್ ರಸ್ತೆಯೆಂದು ಕರೆಯಲಾಗುತ್ತದೆ.

**ತೀರ್ಥಕ್ಷೇತ್ರಗಳ ನಿರ್ಮಾಣ ಮತ್ತು ಜೀರ್ಣೋದ್ಧಾರ:** ಶ್ರೀನಗರ, ಹರಿದ್ವಾರ, ಕೇದಾರನಾಥ, ಬದರಿನಾಥ, ಪ್ರಯಾಗ, ವಾರಣಾಸಿ, ನೈಮಿಷಾರಣ್ಯ, ಜಗನ್ನಾಥಪುರಿ, ರಾಮೇಶ್ವರಂ, ಸೋಮನಾಥ, ಮಹಾಬಲೇಶ್ವರ, ಪುಣೆ, ಉಡುಪಿ, ಕಾತ್ಮಂಡು ಮುಂತಾದೆಡೆ ದೇವಾಲಯಗಳನ್ನು ನಿರ್ಮಿಸಿದರು. ತೀರ್ಥಕ್ಷೇತ್ರಗಳಲ್ಲಿ ಧರ್ಮಶಾಲಾ ಮತ್ತು ಯಾತ್ರಿ ಗೃಹಗಳನ್ನು ನಿರ್ಮಿಸಿದರು ಮತ್ತು ದೇವಪ್ರಯಾಗದಲ್ಲಿ ಬಡವರಿಗಾಗಿ ಭೋಜನಶಾಲೆಯನ್ನು ಸ್ಥಾಪಿಸಿದರು. ಅನೇಕ ಧರ್ಮಶಾಲೆಗಳನ್ನು ನಿರ್ಮಿಸಿದರು. ಕಾನ್ಪುರದ ಬಿಠೂರ್‌ನಲ್ಲಿ ಬ್ರಹ್ಮ ಘಾಟ್ ಅಲ್ಲದೇ ಅನೇಕ ಘಾಟ್ಗಳನ್ನು ನಿರ್ಮಿಸಿದರು. ಕಾಶಿಯಲ್ಲಿ ಮಣಿಕರ್ಣಿಕಾ, ವಾರಣಾಸಿಯ ತುಳಸಿ ಘಾಟ್ ಬಳಿ ಲೋಲಾರ್ಕ್ ಕುಂಡವನ್ನು, ಮಧ್ಯಪ್ರದೇಶದ ಭಿಂಡ್ ಬಳಿಯ ಆಲಂಪುರದಲ್ಲಿ ಹರಿಹರೇಶ್ವರ ದೇವಾಲಯವನ್ನು ನಿರ್ಮಿಸಲಾಯಿತು. ಬಡವರಿಗೆ ಆಹಾರ ವಿತರಣೆಗಾಗಿ ಸದಾವ್ರತ ಆಶ್ರಮವನ್ನು ನಿರ್ಮಿಸಿದರು. ಇವರು ಪವಿತ್ರ ನರ್ಮದೆಯ ದಡದಲ್ಲಿರುವ ಮಹೇಶ್ವರದಲ್ಲಿ ತಮ್ಮ ಆಸ್ಥಾನವನ್ನು ನಿರ್ಮಿಸಿದಳು ಮತ್ತು ಅಲ್ಲಿ ಅನೇಕ ಧಾರ್ಮಿಕ ಕಾರ್ಯಕ್ರಮಗಳು ಮತ್ತು ಪುರಾಣಕಥೆಗಳನ್ನು ಆಯೋಜಿಸಿದರು.

ಆಯೋಧ್ಯಾ ಶ್ರೀ ರಾಮಮಂದಿರ, ಉಜ್ಜಯಿನಿ ಶ್ರೀ ಚಿಂತಾಮಣಿ ಗಣೇಶ ಮಂದಿರ, ಓಂಕಾರೇಶ್ವರ ಮಮಲೇಶ್ವರ ಮಂದಿರ, ನಾಸಿಕ, ಸಂಗಮನೇರ್, ಋಷಿಕೇಶ, ಪಂಢರಾಪುರಗಳಲ್ಲಿ ಶ್ರೀರಾಮ ಮಂದಿರ, ಚೌಂಡಿ (ಜನ್ಮಗ್ರಾಮ) ಶ್ರೀ ಮಹಾದೇವ ಮಂದಿರ, ಭುಸಾವಲ್ ವಾಸುದೇವ ಮಂದಿರ, ಸುಲ್ತಾನ್ಪುರ ಗಣಪತಿ ಮಂದಿರ, ಸಂಬಲ್ ಗ್ರಾಮ ಲಕ್ಷ್ಮೀ ನಾರಾಯಣ ಮಂದಿರ, ಪ್ರಯಾಗ ವಿಷ್ಣುಪಾದ ಮಂದಿರ, ಜೆಜುರಿ ಮಲ್ಹಾರ ಗೌತಮೇಶ್ವರ ಮಂದಿರ, ಮಿರೀ ಮಹಾದೇವ ಮಂದಿರ, ಮಥುರಾ ವೃಂದಾವನದಲ್ಲಿ ಕೃಷ್ಣ ಮಂದಿರ, ಕಾಶಿ ವಿಶ್ವನಾಥ ಮಂದಿರ, ಕಾಶೆವಾಡ ಸೋಮನಾಥ ಮಂದಿರ, ಗಯಾ ಶ್ರೀ ವಿಷ್ಣುಪಾದ ಮಂದಿರ, ಪರಳಿ ವೈದ್ಯನಾಥ ಮಂದಿರ ಸೇರಿದಂತೆ ಖಿಲ್ಜಿ, ತುಘಲಕ್, ಮೊಘಲರು, ನಿಜಾಮರು ಮತ್ತಿತರ ಆಕ್ರಮಣಕಾರರಿಂದ ನಾಶವಾಗಿದ್ದ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿದರು. ಸೋಮನಾಥ ದೇವಾಲಯವನ್ನು ಅಹಲ್ಯಾಬಾಯಿ 1783ರಲ್ಲಿ ಜೀರ್ಣೋದ್ಧಾರ ಮಾಡಿದರು. ದೇವಾಲಯದ ಗರ್ಭಗುಡಿಯಲ್ಲಿ ಅಹಲ್ಯಾಬಾಯಿಯವರು ಬೃಹತ್ ಶಿವಲಿಂಗವನ್ನು ಸ್ಥಾಪಿಸಿದರು. ಇಂದಿಗೂ ಇದೇ ಶಿವಲಿಂಗಕ್ಕೆ ಪ್ರತಿನಿತ್ಯ ಅಭಿಷೇಕ ಪೂಜೆಗಳು ನಡೆಯುತ್ತವೆ. ಆಂಧ್ರಪ್ರದೇಶದ ಶ್ರೀಶೈಲದ ಮಲ್ಲಿಕಾರ್ಜುನ ಜ್ಯೋತಿರ್ಲಿಂಗದ ಪೂಜಾ ವ್ಯವಸ್ಥೆ, ಧರ್ಮಶಾಲೆ ಮತ್ತು ಪಾತಾಳಗಂಗಾ ಘಾಟ್ ನಿರ್ಮಾಣ ಕೈಗೊಂಡರು.

ಅಹಲ್ಯಾ ದೇವಿಯ ನೆನಪಿಗಾಗಿ 1975ರಲ್ಲಿ ಬಿಡುಗಡೆಯಾದ ಮೊದಲ ಅಂಚೆ ಚೀಟಿಯನ್ನು ಇಂದೋರ್‌ನಿಂದ 4.9.1975ರಂದು ಬಿಡುಗಡೆ ಮಾಡಲಾಯಿತು. ದೇವಿ ಅಹಲ್ಯಾ ಜನ್ಮೋತ್ಸವ ಸಮಿತಿಯ ಅಧ್ಯಕ್ಷರು ಮತ್ತು ಮಧ್ಯ ಭಾರತದ ಮಾಜಿ ಶಿಕ್ಷಣ ಸಚಿವರಾಗಿದ್ದ ದಿವಂಗತ ಮನೋಹರ್ ಸಿಂಗ್ ಮೆಪ್ತಾ ಅವರ ಪ್ರಯತ್ನದಿಂದಾಗಿ, ಭಾರತ ಸರ್ಕಾರವು ಅಂಚೆಚೀಟಿ ಬಿಡುಗಡೆಗೆ ಸೂಚಿಸಿತ್ತು, ಆದರೆ ಕೆಲವರು ಭಾರತ ಸರ್ಕಾರದ ಅಂಚೆ ಇಲಾಖೆಯೊಂದಿಗೆ ಪತ್ರ ಬರೆದು ಅಹಲ್ಯಾಬಾಯಿಯವರ ಜನ್ಮ ದಿನಾಂಕ ಸರಿಯಾಗಿಲ್ಲವೆಂದು ತಿಳಿಸಿದ್ದರಿಂದ ತಡವಾಗಿ, ಕೊನೆಗೆ ವಿಳಂಬವಾಗಿ ಮೇಲ್ಕಾಣಿಸಿದ ದಿನಾಂಕದಂದು 250ನೇ ಅಹಲ್ಯಾಬಾಯಿಯ ಜನ್ಮೋತ್ಸವದ ಸಂದರ್ಭದಲ್ಲಿ ಡಾ. ಶಂಕರದಯಾಳ್ ಶರ್ಮಾರವರು ಇಂದೋರ್‌ನ ಸಭೆಯಲ್ಲಿ ಅಂಚೆ ಚೀಟಿಯನ್ನು ಬಿಡುಗಡೆಗೊಳಿಸಿದರು. ಅಹಲ್ಯಾಬಾಯಿ ಹೋಳ್ಕರ್ ದೇವಿಯ 200ನೇ ಪುಣ್ಯತಿಥಿಯ ಸಂದರ್ಭದಲ್ಲಿ ಸಾರ್ವಜನಿಕರ ಬೇಡಿಕೆಯಂತೆ ಅಹಲ್ಯೋತ್ಸವ ಸಮಿತಿಯ ಕೋರಿಕೆಯ ಮೇರೆಗೆ ಸಂಸದೆ ಶ್ರೀಮತಿ ಸುಮಿತ್ರಾ ತಾಯಿಯವರ ಪ್ರಯತ್ನದಿಂದ 1996ರಲ್ಲಿ ಎರಡನೇ ಬಾರಿಗೆ ಅಹಲ್ಯಾಬಾಯಿ ಭಾವಚಿತ್ರವಿರುವ ಸ್ಮೃತಿ ಅಂಚೆ ಚೀಟಿಯನ್ನು ಭಾರತ ಸರ್ಕಾರದಿಂದ ಬಿಡುಗಡೆ ಮಾಡಲಾಯಿತು.

**ಲೋಕಮಾತೆ:** ಪ್ರತಿಕೂಲ ರಾಜಕೀಯ ಪರಿಸ್ಥಿತಿಗಳಿಂದಾಗಿ, ಅಹಲ್ಯಾಬಾಯಿ ಮಾಳ್ವಾ ರಾಜ್ಯದ ರಾಜಧಾನಿಯನ್ನು ಇಂದೋರ್‌ನಿಂದ ನರ್ಮದೆಯ ದಡದಲ್ಲಿರುವ ಮಹೇಶ್ವರಕ್ಕೆ ಸ್ಥಳಾಂತರಿಸಿದರು. ಅಗತ್ಯವಿದ್ದಾಗ ಅಲ್ಲಿ ಯುದ್ಧ ಮಾಡುವುದಲ್ಲದೆ, ಕಲಾವಿದರು, ಧಾರ್ಮಿಕ ಸ್ಥಳಗಳು, ಕುಶಲಕರ್ಮಿಗಳು ಮತ್ತು ಕೃಷಿಕರ ಸರ್ವತೋಮುಖ ಅಭಿವೃದ್ಧಿಗೆ ಇವರು ಮಾಡಿದ ಕಾರ್ಯದ ಫಲವಾಗಿ ಪ್ರಾತಃಸ್ಮರಣೀಯ, ಲೋಕಮಾತೆ, ದೇವತೆಯ ಖ್ಯಾತಿಯನ್ನು ಪಡೆದರು. ಒಮ್ಮೆ ರಾಜಕೋಟ್ ಮಂದಿರದಲ್ಲಿ ಅಸ್ಪೃರ ದೇವಾಲಯದ ಪ್ರವೇಶ ನಿಷೇಧದ ವಿಷಯವಾಗಿ ಕ್ರೋಧಗೊಂಡು "ಈ ಕಾಕಾ (ಚಿಕ್ಕಪ್ಪ) ದೇವಸ್ಥಾನಕ್ಕೆ ಯಾಕೆ ಬರಬಾರದು? ದೇವರು ಎಲ್ಲರಿಗೂ ಸೇರಿದ್ದಾನೆ, ಎಲ್ಲರೂ ದೇವರೇ, ಅವರು ಕೆಟ್ಟವರಾಗಿದ್ದರೆ ದೇವರು ಅವರನ್ನು ಏಕೆ ಸೃಷ್ಟಿಸುತ್ತಿದ್ದ? ದೇವರು ಸೃಷ್ಟಿಸಿದವರನ್ನು ಪವಿತ್ರ–ಅಪವಿತ್ರ ಎಂದು ತಾರತಮ್ಯ ಮಾಡುತ್ತಾರೇನು?" ಎಂದಿದ್ದರು. ■

## ಸಂಸ್ಮರಣೆ ಶ್ರೀ ರಾಮ್‌ಧಾರಿ ಸಿಂಗ್ (23, ಸೆಪ್ಟೆಂಬರ್, 1908 – 24 ಎಪ್ರಿಲ್ 1974)

'ದಿನಕರ್' ಎಂಬ ಕಾವ್ಯನಾಮದಿಂದ ಜನಪ್ರಿಯರಾದ ರಾಮಧಾರಿ ಸಿಂಗ್ ಅವರು ಇತಿಹಾಸ ಕಂಡ ಶ್ರೇಷ್ಠ ಹಿಂದಿ ಕವಿಗಳು ಮತ್ತು ಪ್ರಬಂಧಕಾರರಲ್ಲಿ ಒಬ್ಬರು. ಅವರು "ವೀರ್ ರಾಸ್" ಅಥವಾ ವೀರರ ಶೈಲಿಯ ಸಂಯೋಜನೆಯ ಮೂಲಕ ದೇಶಭಕ್ತಿಯ ಭಾವನೆಗಳನ್ನು ಅಕ್ಷರಗಳ ಮೂಲಕ ಪ್ರಚುರಪಡಿಸಿದವರು. ಅವರ ಬರಹಗಳು ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಭಾರತೀಯ ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ಫೂರ್ತಿ ನೀಡಿತು.

ರಾಮಧಾರಿ ಸಿಂಗ್ ದಿನಕರ್ 23 ಸೆಪ್ಟಂಬರ್ 1908ರಲ್ಲಿ ಜನಿಸಿದರು. ದಿನಕರ್ ಬಾಲ್ಯದಿಂದಲೂ ಕಾವ್ಯದಲ್ಲಿ ತೀವ್ರ ಆಸಕ್ತಿಯನ್ನು ಪ್ರದರ್ಶಿಸಿದರು. ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಹಿಂದಿ ಸಾಹಿತ್ಯದಲ್ಲಿ ಎಂಎ ಪದವಿಯನ್ನೂ ಪಡೆದುಕೊಂಡರು. ಅವರು ತಮ್ಮ ವಿದ್ಯಾರ್ಥಿ ಜೀವನದಲ್ಲಿ ವಿಶ್ವ ದೃಷ್ಟಿಕೋನವನ್ನು ರೂಪಿಸಿದ ವಿವಿಧ ಸಾಹಿತ್ಯಿಕ ಮತ್ತು ತಾತ್ವಿಕ ಪ್ರಭಾವಗಳನ್ನು ಅರಿತುಕೊಂಡು ಸಾಹಿತ್ಯ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು.

ಪ್ರಬಲವಾದ ಚಿತ್ರಣ, ಆಳವಾದ ತಾತ್ವಿಕ ಒಳನೋಟ ಮತ್ತು ಉತ್ಕೃಷ್ಟ ಭಾಷೆಗೆ ಹೆಸರುವಾಸಿಯಾದ ದಿನಕರ್ ಅವರ ಕಾವ್ಯವು ಹಿಂದಿ ಸಾಹಿತ್ಯದ ಮೇಲೆ ಶಾಶ್ವತವಾದ ಪ್ರಭಾವವನ್ನು ಬೀರಿತು. ಅವರ ಕಾವ್ಯ ಕೃತಿಗಳು ರಾಷ್ಟ್ರೀಯತೆಯ ಚೈತನ್ಯವನ್ನು ಆಚರಿಸಿದವು, ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸಿದವು ಮತ್ತು ಸಾಮಾನ್ಯ ಜನರ ಹೋರಾಟಗಳು ಮತ್ತು ಆಕಾಂಕ್ಷೆಗಳನ್ನು ಪ್ರತಿಬಿಂಬಿಸಿದವು. "ರಶ್ಮಿರತಿ," "ಕುರುಕ್ಷೇತ್ರ," ಮತ್ತು "ಪರಶುರಾಮ್ ಕಿ ಪ್ರತೀಕ್ಷಾ" ಮುಂತಾದ ಅವರ ಕೃತಿಗಳು ಗಮನಾರ್ಹವಾಗಿವೆ.

ಮಹಾಭಾರತದ ಕರ್ಣನ ಕಥೆಯ ಮೂಲಕ ಅವರು ತಮ್ಮ ಮಹಾಕಾವ್ಯ ರಶ್ಮಿರತಿಯಲ್ಲಿ ಜಾತಿ ವ್ಯವಸ್ಥೆಯ ಬಗೆಗೆ ಹೀಗೆ ಬರೆಯುತ್ತಾರೆ. "ಪಾತೇ ಹೈ ಸಮ್ಮಾನ್ ತಪೋಬಲ್ ಸೇ ಭೂತಲ್ ಪರ್ ಶೂರ್, ಜಾತಿ-ಜಾತಿ ಕಾ ಶೋರ್ ಮಚಾತೇ ಕೇವಲ ಕಾಯರ್ ಕ್ರೂರ್ (ಭೂಮಿಯಲ್ಲಿ ಶೂರರು ತಮ್ಮ ತಪೋಬಲದಿಂದ ಸನ್ಮಾನ ಪಡೆಯುತ್ತಾರೆ. ಆದರೆ ಕೈಲಾಗದ



ಕ್ರೂರರು ಜಾತಿ ಜಾತಿ ಅಂತಾ ಸುಮ್ಮನೆ ಗಲಭೆ ಮಾಡುತ್ತಾರೆ.) ಜಾತಿ ವ್ಯವಸ್ಥೆಯನ್ನು ನಯವಾಗಿ ತಿರಸ್ಕರಿಸಿದ ಈ ಸಾಲುಗಳು ದಿನಕರ್ ಅವರ ಲೇಖನಿಯ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ.

ತಮ್ಮ ಸಾಹಿತ್ಯದ ಅನ್ವೇಷಣೆಗಳ ಹೊರತಾಗಿ, ದಿನಕರ್ ಸಾಮಾಜಿಕ ಮತ್ತು ರಾಜಕೀಯ ವಿಷಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಅವರು ಭಾರತೀಯ ಸ್ವಾತಂತ್ರ್ಯ ಚಳವಳಿಯಲ್ಲಿ ಉತ್ಸಾಹದಿಂದ ಭಾಗವಹಿಸಿದರು ಮತ್ತು ಜನಸಾಮಾನ್ಯರನ್ನು ಪ್ರೇರೇಪಿಸಲು ಮತ್ತು ಸಜ್ಜುಗೊಳಿಸಲು ತಮ್ಮ ಬರಹಗಳನ್ನು ಬಳಸಿದರು. ಅವರ ಕವಿತೆಗಳು ಬ್ರಿಟಿಷ್ ವಸಾಹತುಶಾಹಿ ವಿರುದ್ಧ ಪ್ರತಿರೋಧದ ಗೀತೆಗಳು ಮತ್ತು ಸಾಮಾಜಿಕ ಬದಲಾವಣೆಗೆ ವೇಗವರ್ಧಕಗಳಾಗಿವೆ. ಸಾಮಾಜಿಕ ಅಸಮಾನತೆ, ತಾರತಮ್ಯ ಮತ್ತು ಭ್ರಷ್ಟಾಚಾರದ ವಿರುದ್ಧ ದಿನಕರ್ ಅವರ ಧ್ವನಿಯು ಜನಸಾಮಾನ್ಯರನ್ನು ಅನುರಣಿಸಿತು ಮತ್ತು ಅವರಿಗೆ ಅಪಾರ ಗೌರವ ಮತ್ತು ಮೆಚ್ಚುಗೆಯನ್ನು ಗಳಿಸಿತು.

ರಾಮಧಾರಿ ಸಿಂಗ್ ದಿನಕರ್ ಅವರ ಸಾಹಿತ್ಯಿಕ ಸಾಮರ್ಥ್ಯ ಮತ್ತು ಸಾಮಾಜಿಕ ಪ್ರಭಾವವನ್ನು ಹಲವಾರು ಪ್ರಶಸ್ತಿಗಳು ಮತ್ತು ಪುರಸ್ಕಾರಗಳ ಮೂಲಕ ಗುರುತಿಸಲಾಗಿದೆ. ಅವರು 1959ರಲ್ಲಿ ಪದ್ಮಭೂಷಣವನ್ನು ಪಡೆದರು. ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ ಮತ್ತು ಭಾರತೀಯ ಜ್ಞಾನಪೀಠ ಮೂರ್ತಿದೇವಿ ಪ್ರಶಸ್ತಿ ಇತ್ಯಾದಿಗಳನ್ನು ಸಹ ನೀಡಿ ಗೌರವಿಸಲಾಯಿತು. ಈ ಮನ್ನಣೆಗಳು ಸಾಹಿತ್ಯದ ಗುಣಮಟ್ಟಕ್ಕೆ ಹಿಡಿತ ಕೈಗನ್ನಡಿಯಾಗಿದೆ. ಇಂತಹ ಮಹಾನ್ ವ್ಯಕ್ತಿತ್ವ 24 ಎಪ್ರಿಲ್ 1974ರಂದು ಇಹಲೋಕ ತ್ಯಜಿಸಿದರು.

## ಅಂಧಕಾರದಲ್ಲಿ ಮುಳುಗಿದವರ ಬಾಳಿಗೆ ಬೆಳಕಾದವರು

2 ಮೇ 2019ರಲ್ಲಿ ಗಂಟೆಗೆ 200ಕಿ.ಮೀ. ಗಿಂತಲೂ ವೇಗವಾಗಿ ಬೀಸಿದ 'ಫ್ಯಾನಿ' ಬಿರುಗಾಳಿಯು ಒರಿಸ್ಸಾದಲ್ಲಿ ಎಂತಹ ಹಾನಿಯನ್ನು ಉಂಟುಮಾಡಿತ್ತೆಂದರೆ ಅದನ್ನು ನಾವು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಕಟಕ್, ಭುವನೇಶ್ವರ್, ಕುರ್ದಾ, ಪುರಿ ಸೇರಿದಂತೆ 5 ಜಿಲ್ಲೆಗಳ ಅನೇಕ ಪಟ್ಟಣಗಳು ಕತ್ತಲಲ್ಲಿ ಮುಳುಗಿ ಹೋದವು. 1ಲಕ್ಷ 56 ಸಾವಿರ ವಿದ್ಯುತ್ ಕಂಬಗಳು ಮುರಿದು ಬಿದ್ದಿದ್ದವು ಹಾಗೂ ಒಂದೂವರೆ ಕೋಟಿಯಷ್ಟು ತೆಂಗಿನ ಮರಗಳು ಭೀಕರ ಗಾಳಿಯ ರಭಸಕ್ಕೆ ಧರೆಗುರುಳಿ ನಾಶವಾಗಿದ್ದವು. ಈ ಗ್ರಾಮಗಳಲ್ಲಿ ನೆಲೆಸಿದ್ದ ರೈತರ ಬಳಿ ಈಗ ಹೊಲ-ಗದ್ದೆಗಳೂ ಇರಲಿಲ್ಲ, ವಾಸಿಸುತ್ತಿದ್ದ ಮನೆಯೂ ಇರಲಿಲ್ಲ. ಈ ಭೀಕರ ಚಂಡಮಾರುತವು 64 ಜನರನ್ನು ಹಾಗೂ 65,000 ಜಾನುವಾರುಗಳನ್ನು ಬಲಿಪಡೆದಿತ್ತು. ಛಾವಣಿಯೇ ಇಲ್ಲದ ಮನೆಗಳಲ್ಲಿ ತಮ್ಮದಾಗಿರುವ ಎಲ್ಲವನ್ನೂ ಕಳೆದುಕೊಂಡು ಕುಳಿತಿದ್ದ ಜನರ ನೆರವಿಗೆ ಮೊದಲು ಬಂದವರು ಸಂಘದ ಸ್ವಯಂಸೇವಕರು.





ಒರಿಸ್ಸಾದಲ್ಲಿ, ಸಂಘದ ಸ್ವಯಂಸೇವಕರು ನಡೆಸುತ್ತಿರುವ ಉತ್ಕಲ್ ಸಂತ್ರಸ್ತರ ಪರಿಹಾರ ಸಮಿತಿಯ 1500ಕ್ಕೂ ಹೆಚ್ಚು ಸ್ವಯಂಸೇವಕರು ಮೇ 5 ರಿಂದ ಹಗಲಿರುಳೆನ್ನದೆ ಸಂತ್ರಸ್ತರಿಗೆ ನೆರವು ನೀಡಿದ್ದರು. ಸಮಿತಿಯ ವತಿಯಿಂದ ನಡೆಸುತ್ತಿರುವ ಪರಿಹಾರ ಶಿಬಿರಗಳಲ್ಲಿ 96,000 ಕ್ಕಿಂತಲೂ ಹೆಚ್ಚಿನ ಜನರಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು ಹಾಗೂ ತಾತ್ಕಾಲಿಕ ಛಾವಣಿಗಾಗಿ 1.2ಲಕ್ಷ ಟಾರ್ಪಲಿನ್'ಗಳ ವ್ಯವಸ್ಥೆ ಮಾಡಿ ಈ ಸಂತ್ರಸ್ತ ಕುಟುಂಬಗಳನ್ನು ಮಳೆಯಿಂದ ಪಾರುಮಾಡುವ ಯತ್ನವನ್ನು ಮಾಡಲಾಯಿತು.



'ಭುವನೇಶ್ವರದಿಂದ 25 ಕಿ.ಮೀ ದೂರದಲ್ಲಿರುವ ಬಾಲೀಪಾಟ್ನಾ ಎಂಬ ಒಂದು ಸಣ್ಣ ಹಳ್ಳಿಯನ್ನೆ ತೆಗೆದುಕೊಳ್ಳುವುದಾದರೆ ಈ ಪ್ರದೇಶದ ಪ್ರಮುಖ ವಾಣಿಜ್ಯ ಬೆಳೆ ಸಂಪೂರ್ಣವಾಗಿ ನಾಶವಾಗಿತ್ತು. ಹಾಗೆಯೇ ಮುಸ್ಲಿಂ ಬಾಹುಳ್ಯವಿದ್ದ ಈ ಹಳ್ಳಿಯ ಜನರ ಪರಿಸ್ಥಿತಿ ಶೋಚನೀಯವಾಗಿತ್ತು. ಒಂದು ಪರಿವಾರಕ್ಕೆ ಪರಿಹಾರ ಸಮಿತಿಯ ಸದಸ್ಯರು ಛಾವಣಿಗಾಗಿ ಟಾರ್ಪಲಿನ್, ಧರಿಸಲು ಬಟ್ಟೆ ಹಾಗೂ ಸೊಳ್ಳೆ ಪರದೆಗಳೊಂದಿಗೆ ಅಲ್ಲಿಗೆ ಹೋದಾಗ ಅಲ್ಲಿನ ಸೈಫುದ್ದೀನ್ ಖಾನ್ ಎಂಬ ವ್ಯಕ್ತಿಯ ಕಣ್ಣಲ್ಲಿ ನೀರೂರಿತ್ತು. ಆ ಬಡ ರೈತ ತಾನು ಇಲ್ಲಿಯ ತನಕ ಸಂಘದವರನ್ನು ತನ್ನ ಶತ್ರುಗಳೆಂದು ಭಾವಿಸಿದ್ದೆ, ಆದರೆ ಸಂಘದವರೇ ನಮಗೆ ಸಹಾಯಮಾಡುವಲ್ಲಿ ಮುಂದಾದ ಮೊದಲಿಗರು ಎಂದು ಅಳುತ್ತಳುತ್ತಾ ಹೇಳಿದರು.

ಈ ಅನಾಹುತದಿಂದ ಉಂಟಾದ ಹಾನಿಯನ್ನು ಪರಿಹಾರ ಸಾಮಗ್ರಿಗಳನ್ನು ಸಂಗ್ರಹಿಸುವ ಮೂಲಕ ಸರಿದೂಗಿಸಲಾಗುವುದಿಲ್ಲ. ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಲು ನಿರಂತರವಾಗಿ ಕೆಲಸ ಮಾಡಬೇಕಾಗಿದೆ. ಸಂಘದ ಪೂರ್ವಕ್ಷೇತ್ರದ ಕ್ಷೇತ್ರ ಸೇವಾ ಪ್ರಮುಖ್ ಜಗದೀಶ್ ಅವರು ಮುಂದಿನ ಯೋಜನೆಯ ಬಗ್ಗೆ ಬೆಳಕು ಚೆಲ್ಲುತ್ತಾ ಹೇಳುತ್ತಾರೆ "ನಾವು ಉದ್ಯೋಗದ ಬಗ್ಗೆ ವಿಶೇಷ ಗಮನ ಹರಿಸುತ್ತಿದ್ದೇವೆ. ಈ ಕುಟುಂಬಗಳ ಮೂಲ ಆದಾಯಕ್ಕಾಗಿ ತೆಂಗಿನಕಾಯಿ, ಕಡಲೆಕಾಯಿ ಮತ್ತು ಗೋಡಂಬಿ ಗಿಡಗಳನ್ನು ನೆಡಲಾಗುವುದು, ಹಾಗೆಯೇ ಪಾಳುಬಿದ್ದ ಸರ್ಕಾರಿ ಭೂಮಿಗಳಲ್ಲಿ ಶ್ರೀಗಂಧದ ಮರಗಳನ್ನು ನೆಡಲಾಗುವುದು ಮತ್ತು ಮಳೆಗಾಲಕ್ಕೂ ಮುನ್ನ ಎಲ್ಲಾ ಮನೆಗಳಿಗೂ ಛಾವಣಿಗಳನ್ನು ಹಾಕಲಾಗುವುದು."

ಚಂಡಮಾರುತವು ಸಮುದ್ರದ ದಡದಲ್ಲಿದ್ದ ಜೂಮ್ ಜಂಗಲ್ ಎಂದು ಕರೆಯಲ್ಪಡುವ ಎತ್ತರವಾಗಿ ಬೆಳೆದು ನಿಂತಿದ್ದ ಮರಗಳನ್ನು ನಾಶಪಡಿಸಿದೆ. ಇದರ ಪರಿಣಾಮವಾಗಿ ಹವಾಮಾನದ ವ್ಯತಿರಿಕ್ತ ಪರಿಣಾಮಗಳು ನೇರವಾಗಿ ನಗರಗಳ ಮೇಲೆ ಬೀರುತ್ತವೆ. ಹಾಗಾಗಿ ಸಂಘವು ಈ ಕಾಡುಗಳನ್ನು ಪುನಃ ಅಭಿವೃದ್ಧಿಪಡಿಸುವ ಯೋಜನೆಗಳನ್ನು ಹಾಕಿಕೊಂಡು, ಜೀವನೋಪಾಯಕ್ಕಾಗಿ 50 ಕುಟುಂಬಗಳಿಗೆ ದೋಣಿಗಳನ್ನು ನೀಡಲಾಗಿದೆ ಹಾಗೂ ಇನ್ನಷ್ಟು ದೋಣಿಗಳನ್ನು ಒದಗಿಸುವ ಪ್ರಯತ್ನವನ್ನೂ ಮಾಡಲಾಗುತ್ತಿದೆ. ವೀಳ್ಯದೆಲೆ ಬೆಳೆಯನ್ನು ಅವಲಂಬಿಸಿರುವ 600 ಪರಿವಾರಗಳ ಪುನರ್ವಸತಿಯನ್ನು ಕಲ್ಪಿಸುವ ಪ್ರಯತ್ನವನ್ನೂ ಮಾಡಲಾಗುತ್ತಿದೆ.

## ಮತದಾನ ನಮ್ಮ ರಾಷ್ಟ್ರೀಯ ಕರ್ತವ್ಯ, ತಪ್ಪದೆ ಮತದಾನ ಮಾಡಬೇಕು


ಮತದಾನ ಎನ್ನುವುದು ನಮ್ಮೆಲ್ಲರ ಪಾಲಿನ ರಾಷ್ಟ್ರೀಯ ಕರ್ತವ್ಯ. ಅದನ್ನು ನಮ್ಮ ಪ್ರಥಮ ಆದ್ಯತೆಯಿಂದು ನೆರವೇರಿಸಬೇಕು. ರಾಷ್ಟ್ರದ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಸದೃಢಗೊಳಿಸಲು, ಅಧಿಕಾರಕ್ಕಾಗಿಯಲ್ಲದೆ, ಜವಾಬ್ದಾರಿಯಿಂದು ಕಾರ್ಯನಿರ್ವಹಿಸುವ, ಜನರ ಸಮಸ್ಯೆಗಳಿಗೆ ಸ್ಪಂದಿಸುವ ಜನಪ್ರತಿನಿಧಿಗಳ ಆಯ್ಕೆ ನಮ್ಮ ಜವಾಬ್ದಾರಿಯಾಗಿದೆ. ನಾವು ಆಲೋಚಿಸಿ ಆರಿಸುವ ಒಬ್ಬೊಬ್ಬ ಜನಪ್ರತಿನಿಧಿ ನಮ್ಮ ಸಮಾಜದ ಏಳಿಗೆಗಾಗಿ ದುಡಿಯುವವನಾಗುತ್ತಾನೆ. ಹಾಗಾಗಿ ಉತ್ತಮರನ್ನು ಆರಿಸುವ ಜವಾಬ್ದಾರಿ ನಮ್ಮೆಲ್ಲರದ್ದು. ರಾಷ್ಟ್ರ ಮತ್ತು ರಾಜ್ಯಕ್ಕೆ ಜನಪ್ರತಿನಿಧಿಗಳನ್ನು ಚುನಾಯಿಸುವ ಮೂಲಕ ನಾಡಿನ ಸರ್ವತೋಮುಖ ಅಭಿವೃದ್ಧಿಗೆ ನಾವೂ ಕೈಜೋಡಿಸುವುದಕ್ಕಾಗುತ್ತದೆ. ಆದ್ದರಿಂದ ನಮ್ಮ ಮತದಾನಕ್ಕಿರುವ ಶಕ್ತಿಯನ್ನು ಸಮರ್ಥವಾಗಿ ಬಳಸಿಕೊಂಡು ಸದೃಢ ಸಮಾಜವನ್ನು ಕಟ್ಟಲು ಮುಂದಾಗೋಣ. ಹಾಗೆಯೇ ಮತದಾನ ಮಾಡಿದವರಿಗೆ ಮಾತ್ರ ವ್ಯವಸ್ಥೆಯನ್ನು ಪ್ರಶ್ನಿಸುವ ನೈತಿಕ ಹಕ್ಕಿರುವುದರಿಂದ ಶೇ.100 ರಷ್ಟು ಮತದಾನ ಮಾಡಿ ಸಮೃದ್ಧ ಸಮಾಜವನ್ನು ನಿರ್ಮಿಸೋಣ.

ಅನೇಕ ಕಾರಣಗಳಿಂದ ಮತದಾನ ಮಾಡುವುದನ್ನು ನಮ್ಮ ರಾಷ್ಟ್ರೀಯ ಕರ್ತವ್ಯ ಎನ್ನುವುದನ್ನು ನಾವು ಮರೆತಿದ್ದೇವೆ. ರಾಜಕೀಯ ಕೆಸರೆರಚಾಟ, ನಂಬಿಕೆಯನ್ನು ಉಳಿಸಿಕೊಳ್ಳದ ವ್ಯವಸ್ಥೆ, ಜನಸಾಮಾನ್ಯರಿಗೆ ಅರಿಯುವುದಕ್ಕೆ ಕಷ್ಟವಾಗುವಂತಹ ಸರ್ಕಾರಿ ನಿಯಮಗಳು, ನೊಂದವರ ಸಹಕಾರಕ್ಕೆ ಬಾರದ ಅಧಿಕಾರಿ ವರ್ಗ ಹೀಗೆ ಅನೇಕ ಕಾರಣಗಳಿಗೆ ಮತದಾನ ಪ್ರಕ್ರಿಯೆಯ ಕುರಿತು ನಿಲಕ್ಷ್ಯ ಮೂಡಿರಬಹುದು. ಹಾಗೆಯೇ ಈ ಕಾರಣಗಳ ಜೊತೆಗೆ ನಮ್ಮ ಜಾತಿಯ ಅಭ್ಯರ್ಥಿಗೆ ಅವಕಾಶ ಸಿಗಲಿಲ್ಲ, ನಾವು ಸೂಚಿಸಿದ ನಾಯಕರಿಗೆ ಮನ್ನಣೆ ದೊರೆಯಲಿಲ್ಲ ಎಂಬಿತ್ಯಾದಿ ಸ್ವಾರ್ಥದ ಕಾರಣಗಳಿಂದಲೂ ಮತದಾನ ಬಹಿಷ್ಕಾರದ ನಿರ್ಧಾರಕ್ಕೆ ಅನೇಕರು ಬರುವುದಿದೆ. ಇಂತಹ ಸಂದರ್ಭದಲ್ಲಿ ದೇಶ ಮೊದಲು, ಸಮಾಜ ಹಿತಕ್ಕೆ ಸಹಕಾರಿಯಾಗುವ ಮತದಾನ ಪ್ರಕ್ರಿಯೆಯಲ್ಲಿ ನಾವು ಭಾಗವಹಿಸಿ ನಮ್ಮ ಕರ್ತವ್ಯವನ್ನು ನಿಭಾಯಿಸಬೇಕು.

## ಪುಸ್ತಕ ಪರಿಚಯ: ಶಿವನಿಗಾಗಿ ಕಾಯುತ್ತಾ

**ಮೂಲ:** ಡಾ.ವಿಕ್ರಮ್ ಸಂಪತ್
**ಕನ್ನಡಕ್ಕೆ:** ಜಿ.ಎಲ್. ಶೇಖರ್, ನರೇಂದ್ರ ಕುಮಾರ್ ಎಸ್.ಎಸ್.
**ಪ್ರಕಾಶಕರು:** ಸಾಹಿತ್ಯ ಪ್ರಕಾಶನ ಹುಬ್ಬಳ್ಳಿ
**ಬೆಲೆ:** 475ರೂ.

ಡಾ. ವಿಕ್ರಮ್ ಸಂಪತ್ ಅವರ Waiting for Shiva- unearthing the truth of Kashi's Gyan Vapi – ಎಂಬ ತುಂಬ ಕುತೂಹಲ ಹುಟ್ಟಿಸಿದ ಇಂಗ್ಲಿಷ್ ಕೃತಿ ತಮಗೆ ಗೊತ್ತು! ಕನ್ನಡದ ಆಪ್ತ ಅವತರಣಿಕೆ ಇದೀಗ ಬರುತ್ತಿದೆ– "ಶಿವನಿಗಾಗಿ ಕಾಯುತ್ತ: ಕಾಶಿಯ ಜ್ಞಾನವಾಪಿ ಸತ್ಯದ ಅನಾವರಣ"! ಸಂಶೋಧಕರೂ ಇತಿಹಾಸಕಾರರೂ ಮಾತ್ರವಲ್ಲ, ಪ್ರತಿಯೊಬ್ಬ ಭಾರತೀಯರೂ ಓದಲೇಬೇಕಾದ ಕೃತಿ ಅದು. ಬಣ್ಣದ 16 ಪುಟಗಳೂ ಸೇರಿದಂತೆ 360 ಪುಟಗಳ ಸುಂದರ ಪುಸ್ತಕ ಇದಾಗಿದೆ.





ಶಿವನಿಗಾಗಿ ಕಾಯುತ್ತ: ಕಾಶಿ ಜ್ಞಾನವಾಪಿಯ ಸತ್ಯದ ಅನಾವರಣ" ಕಾಶಿಯ ಇತಿಹಾಸ, ಪ್ರಾಚೀನತೆ ಮತ್ತು ಪಾವಿತ್ರ್ಯವನ್ನು, ವಿಶ್ವೇಶ್ವರ ಅಥವಾ ವಿಶ್ವನಾಥನ ರೂಪದಲ್ಲಿ ಭಗವಾನ್ ಶಿವನ ಸನ್ನಿಧಿಯಾಗಿ ಮರುಸೃಷ್ಟಿಸುತ್ತದೆ. ಸ್ವತಃ ಶಿವನೇ ತನ್ನ ಭಕ್ತರಿಗೆ, ಈ ನಗರದಲ್ಲಿ ಮೃತರಾದರೆ ಮೋಕ್ಷವನ್ನು ದಯಪಾಲಿಸುವ ಭರವಸೆ ನೀಡಿರುವನು. ಶತಮಾನಗಳಿಂದ ಭಕ್ತರಿಗೆ ಆಶ್ರಯತಾಣವಾಗಿರುವ ಮತ್ತು ವಿಗ್ರಹಭಂಜಕರ ಭಯಂಕರ ಆಕ್ರಮಣಗಳಿಗೆ ಗುರಿಯಾಗಿರುವ ವಿಶ್ವೇಶ್ವರನ ಸ್ವಯಂಭೂ ಜ್ಯೋತಿರ್ಲಿಂಗವಿರುವ ಇಲ್ಲಿನ ದೇವಾಲಯದ ಇತಿಹಾಸವನ್ನು ಈ ಪುಸ್ತಕವು ಅನಾವರಣಗೊಳಿಸುತ್ತದೆ.

ಪುಸ್ತಕಕ್ಕಾಗಿ ಸಂಪರ್ಕಿಸಿ: 6360581957

ಸಂಪಾದಕೀಯ ಸಹಕಾರ: ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಗಿರಿಧರ್ ಉದ್ಯಾವರ, ದೀಕ್ಷಿತ್ ನಾಯರ್ ಮಂಡ್ಯ, ಸುಲಕ್ಷಣಾ ಶರ್ಮಾ, ಪಂಚಮಿ ಬಾಕಿಲಪದವು

### 2025ಕ್ಕೆ ಭಾರತದ ಆರ್ಥಿಕತೆ ದರ ಶೇಕಡಾ 7ಕ್ಕೆ ಏರಿಕೆ: ವಿಶ್ವಬ್ಯಾಂಕ್




ಪ್ರಸಕ್ತ ಹಣಕಾಸು ವರ್ಷದಲ್ಲಿ ಭಾರತೀಯ ಆರ್ಥಿಕತೆಯ ಬೆಳವಣಿಗೆ ದರವನ್ನು ವಿಶ್ವಬ್ಯಾಂಕ್ ಶೇ.7ಕ್ಕೆ ಏರಿಸಿದೆ. ದಕ್ಷಿಣ ಏಷ್ಯಾದ ಪ್ರಬಲ ಆರ್ಥಿಕತೆಯಾಗಿರುವ ಭಾರತದ ಆರ್ಥಿಕ ಬೆಳವಣಿಗೆಯ ದರ ಉತ್ತಮವಾಗಿದ್ದು, ಪ್ರಾಥಮಿಕ, ದ್ವಿತೀಯ ಮತ್ತು ಸೇವಾ ವಲಯಗಳ ಕೊಡುಗೆಯಿಂದಾಗಿ ಆರ್ಥಿಕ ಸ್ಥಿತಿಗತಿಗಳು ಧನಾತ್ಮಕವಾಗಿ ಬದಲಾಗಿವೆ ಎಂದು ವಿಶ್ವ ಬ್ಯಾಂಕ್ ತಿಳಿಸಿದೆ. 24ನೇ ಹಣಕಾಸು ವರ್ಷದಲ್ಲಿ ಭಾರತದ ಬೆಳವಣಿಗೆ ದರ ಶೇ.6.6 ರಷ್ಟು ಇರಲಿದೆ, ಎಂದು ಜೂನ್‌ನಲ್ಲಿ ವಿಶ್ವಬ್ಯಾಂಕ್ ಅಂದಾಜಿಸಿತ್ತು. ವಿಶ್ವಬ್ಯಾಂಕ್ ವರದಿಯ ಪ್ರಕಾರ, ಜಾಗತಿಕ ಸವಾಲುಗಳ ಹೊರತಾಗಿಯೂ ಭಾರತದ ಬೆಳವಣಿಗೆ ಪ್ರಬಲವಾಗಿ ಮುಂದುವರೆದಿದೆ. ಉತ್ತಮ ಮುಂಗಾರು ಮತ್ತು ಖಾಸಗಿ ಬಳಕೆಯಲ್ಲಿನ ಸುಧಾರಣೆಯಿಂದಾಗಿ, ಭಾರತದ ಒಟ್ಟು ದೇಶೀಯ ಉತ್ಪನ್ನದ (ಜಿಡಿಪಿ) ಅಂದಾಜನ್ನು ಪರಿಷ್ಕರಿಸಲಾಗಿದೆ ಎಂದು ವಿಶ್ವಬ್ಯಾಂಕ್‌ನ ಹಿರಿಯ ಅರ್ಥಶಾಸ್ತ್ರಜ್ಞ ರಾನ್ ಲಿ ಹೇಳಿದ್ದಾರೆ.

### 10 ರಾಜ್ಯಗಳಲ್ಲಿ 12 ಕೈಗಾರಿಕಾ ನಗರ ನಿರ್ಮಾಣಕ್ಕೆ ಕೇಂದ್ರ ಒಪ್ಪಿಗೆ

ದೇಶದ ಆರು ಕೈಗಾರಿಕಾ ಕಾರಿಡಾರ್‌ಗಳಲ್ಲಿ 12 ಕೈಗಾರಿಕಾ ನಗರಗಳ ನಿರ್ಮಾಣದ ಬೃಹತ್ ಯೋಜನೆಗೆ ಕೇಂದ್ರ ಸಂಪುಟ ಬುಧವಾರ ಅನುಮೋದನೆ ನೀಡಿದೆ. 10 ರಾಜ್ಯಗಳಲ್ಲಿ ಈ ಬೃಹತ್ ಯೋಜನೆಗಳು ಅನುಷ್ಠಾನಕ್ಕೆ ಬರಲಿವೆ. ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಂಪುಟ ಸಭೆಯಲ್ಲಿ 10 ರಾಜ್ಯಗಳಲ್ಲಿ 12 ಕೈಗಾರಿಕಾ ನಗರಗಳನ್ನು ನಿರ್ಮಿಸುವ 28,602 ಕೋಟಿ ರೂ.ಗಳ ಬೃಹತ್ ಯೋಜನೆಗೆ ಅನುಮೋದನೆ ನೀಡಲಾಗಿದೆ. ಇದರಿಂದ 40 ಲಕ್ಷ ಉದ್ಯೋಗ ಸೃಷ್ಟಿಯಾಗಲಿದೆ.

## ಸಾಲುದ್ದದ ಸುದ್ದಿಗಳು

### 70000 ಮಕ್ಕಳ ಮರಣ ತಪ್ಪಿಸುತ್ತಿರುವ 'ಸ್ವಚ್ಛ ಭಾರತ'

ಸ್ವಚ್ಛ ಭಾರತ ಯೋಜನೆಯಡಿ ದೇಶಾದ್ಯಂತ ಶೌಚಾಲಯಗಳನ್ನು ನಿರ್ಮಿಸಿದ್ದರಿಂದ ಭಾರತದಲ್ಲಿ ಪ್ರತಿ ವರ್ಷ 60 ರಿಂದ 70 ಸಾವಿರದಷ್ಟು ವರ್ಷದೊಳಗಿನ ಮಕ್ಕಳು ಸಾವಿನಿಂದ ಬಚಾವಾಗುತ್ತಿವೆ ಎಂದು ಅಧ್ಯಯನ ವರದಿಯೊಂದು ಹೇಳಿದೆ. ಕಡಿಮೆ ಹಾಗೂ ಮಧ್ಯಮ ಆದಾಯ ಹೊಂದಿರುವ ದೇಶಗಳು ಇದೇ ಮಾದರಿ ಆಳ ವಡಿಸಿಕೊಳ್ಳಬೇಕು ಎಂದು ಸಲಹೆ ಮಾಡಿದೆ.

ಸುಧಾರಿತ ನೈರ್ಮಲ್ಯ ಸೌಲಭ್ಯವು ದೇಶದ ಸಾರ್ವಜನಿಕ ಆರೋಗ್ಯ ಕ್ಷೇತ್ರದ ರೂಪಾಂತರಕ್ಕೆ ಕಾರಣವಾಗುತ್ತದೆ ಎಂದು ಹೇಳಿದ್ದಾರೆ. ಅಮೆರಿಕದ ಅಂತಾರಾಷ್ಟ್ರೀಯ ಆಹಾರ ನೀತಿ ಸಂಶೋಧನಾ ಸಂಸ್ಥೆಯ ಸಂಶೋಧಕರನ್ನು ಒಳಗೊಂಡ ತಂಡವು ದೇಶದ 35 ರಾಜ್ಯ / ಕೇಂದ್ರಾಡಳಿತ ಪ್ರದೇಶಗಳು ಹಾಗೂ 600ಕ್ಕೂ ಹೆಚ್ಚು ಜಿಲ್ಲೆಗಳ ರಾಷ್ಟ್ರೀಯ ಪ್ರಾತಿನಿಧಿಕ ಸಮೀಕ್ಷೆಯನ್ನು ಆಧರಿಸಿ ಅಧ್ಯಯನ ವರದಿಯೊಂದನ್ನು ಸಿದ್ಧಪಡಿಸಿದೆ. ಈ ವರದಿಯನ್ನು ಬ್ರಿಟನ್‌ನ ವೈಜ್ಞಾನಿಕ ನಿಯತಕಾಲಿಕೆ 'ನೇಚರ್' ಪ್ರಕಟಿಸಿದೆ.

### ಭಾರತದ 2ನೇ ಅಣ್ವಸ್ತ್ರ ಸಜ್ಜಿತ ಐಎನ್‌ಎಸ್ ಅರಿಘಾತ್ ನಿಯೋಜನೆ

ಭಾರತದ 2ನೇ ಅಣ್ವಸ್ತ್ರ ಸಜ್ಜಿತ ಐಎನ್‌ಎಸ್ ಅರಿಘಾತ್ ಜಲಾಂತರ್ಗಾಮಿಯನ್ನು ಆಂಧ್ರಪ್ರದೇಶದ ವಿಶಾಖಪಟ್ಟಣದಲ್ಲಿ ನಿಯೋಜಿಸಲಾಯಿತು. ನಿಯೋಜನೆ ಸಮಾರಂಭದಲ್ಲಿ ಪಾಲ್ಗೊಂಡ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಆತ್ಮನಿರ್ಭರ ಭಾರತದ ಸಾಧನೆಯಲ್ಲಿ ಇದೊಂದು ಮೈಲುಗಲ್ಲು ಎಂದು ಬಣ್ಣಿಸಿದರು. ಆರು ಸಾವಿರ ಟನ್ ತೂಕದ ಅರಿಘಾತ್ ಇಂಡೋ – ಪೆಸಿಫಿಕ್ ಗಸ್ತು ತಿರುಗಲು ಸಿದ್ಧವಾಗಿದೆ ಎಂದು ರಾಜನಾಥ್ ಸಿಂಗ್ ಹೇಳಿದ್ದಾರೆ. ಐಎನ್‌ಎಸ್ ಅರಿಘಾತ್ ಭಾರತದ ಅರಿಹಂತ್ ಜಲಾಂತರ್ಗಾಮಿ ಯೋಜನೆಯ ಭಾಗವಾಗಿದ್ದು, ಇದನ್ನು 900 ಶತಕೋಟಿ ರೂಪಾಯಿ



(12 ಶತಕೋಟಿ ಡಾಲರ್) ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ. 2017ರಲ್ಲೇ ವಿಶಾಖಪಟ್ಟಣಂನ ಹಡಗು ನಿರ್ಮಾಣ ಕೇಂದ್ರದಲ್ಲಿ ನಿರ್ಮಾಣ ಹಂತದಲ್ಲಿದ್ದ ಇದು ಗುಪ್ತಚರ ಮಾಹಿತಿ ಸಂಗ್ರಹಣೆ ಮತ್ತು ವಿಶೇಷ ಕಾರ್ಯಾಚರಣೆಗಳಿಗೂ ಉಪಯುಕ್ತವಾಗಲಿದೆ. ಇದು ಭಾರತದ ಮೇಲ್ಭಾಗದ ರಕ್ಷಣೆ, ಹೊಸ ಬೆದರಿಕೆಗಳಿಗೆ ತ್ವರಿತವಾಗಿ ಪ್ರತಿಕ್ರಿಯೆ ಮುಂತಾದ ಅನೇಕ ಕೆಲಸಗಳನ್ನು ಮಾಡಲಿದೆ. ಸಾಂಪ್ರದಾಯಿಕ ಜಲಾಂತರ್ಗಾಮಿ ನೌಕೆಗಳಿಗೆ ಹೋಲಿಸಿದರೆ, ಹೆಚ್ಚಿನ ಸಾಮರ್ಥ್ಯವಿರುವ ಇದು ತಿಂಗಳುಗಳವರೆಗೆ ನೀರಿನಾಳದಲ್ಲಿ ಉಳಿದುಕೊಳ್ಳಬಹುದು. ಜಲಾಂತರ್ಗಾಮಿ ನೌಕೆಯ ತೂಕ 6,000 ಟನ್‌ಗಳಾದರೆ, ಉದ್ದ 112 ಮೀಟರ್, ಐಎನ್‌ಎಸ್ ಅರಿಘಾತ್ ನೀರಿನ ಮೇಲ್ಮೈಯಲ್ಲಿ ಗಂಟೆಗೆ 22–28 ಕಿಮೀ ಗರಿಷ್ಠ ವೇಗವನ್ನು ತಲುಪಬಹುದು ಮತ್ತು ನೀರಿನಾಳದಲ್ಲಿ ಗಂಟೆಗೆ 44 ಕಿಮೀ ವೇಗದಲ್ಲಿ ಚಲಿಸಬಲ್ಲದು. ಐಎನ್‌ಎಸ್ ಅರಿಹಂತ ವರ್ಗಕ್ಕೆ ಸೇರಿರುವ ಈ ಜಲಾಂತರ್ಗಾಮಿಯು ಭಾರತದ ಮೂರೂ ಸೇನೆಗಳ ಬಲವನ್ನು ಹೆಚ್ಚಿಸಲಿದೆ.

### ಕೇಂದ್ರದಿಂದ ಕೃಷಿರಂಗಕ್ಕೆ ₹13,966 ಕೋಟಿ ಅಸ್ತು

ಕೃಷಿರಂಗಕ್ಕೆ ತುಂಬು ಉತ್ತೇಜನ ಮತ್ತು ದೇಶಾದ್ಯಂತ ಆಹಾರ ಭದ್ರತೆ ವಿಸ್ತರಿಸುವ ಆಶಯದ 13,966 ಕೋಟಿ ರೂ. ಮೊತ್ತದ ಪ್ಯಾಕೇಜ್ ಅನ್ನು ಕೇಂದ್ರ ಸಚಿವ ಸಂಪುಟ ಸಭೆ ಅಸ್ತು ಎಂದಿದೆ. ರೈತರ ಜೀವನಮಟ್ಟ ಸುಧಾರಿಸುವ ಮೂಲಕ ಕೃಷಿರಂಗಕ್ಕೆ ಉತ್ತೇಜನ ನೀಡುವುದು ಎಂಬ ಆಶ್ರಯವನ್ನು ಆಧಾರವಾಗಿದೆ ಏಳು ಪ್ರಮುಖ ಯೋಜನೆಗಳಿಗೆ ಸಂಪುಟ ಸಭೆ ಸಮ್ಮತಿ ನೀಡಿದೆ. ರೈತರು ಎದುರಿಸುತ್ತಿರುವ ಸವಾಲುಗಳು ಮತ್ತು ಅವರ ಆದಾಯ ವರ್ಧನೆಗೆ ಕೈಗೊಳ್ಳಬೇಕಾದ ಕ್ರಮಗಳು ಸೇರಿದಂತೆ ಮಹತ್ವದ ನಿರ್ಧಾರಗಳನ್ನು ಸಭೆಯಲ್ಲಿ ಕೈಗೊಳ್ಳಲಾಗಿದೆ.

## ಕೊರತೆಯನ್ನು ಮೆಟ್ಟಿ ನಿಂತು ಪ್ಯಾರಾಲಿಂಪಿಕ್ಸ್‌ನಲ್ಲಿ ಸತತ 2ನೇ ಬಾರಿ ಚಿನ್ನ ಗೆದ್ದ ಅವನಿ ಲೇಖರ

ಪ್ರೇರಣಾ

ಅವನಿ ಲೇಖರ ಜೈಪುರದ ಹುಡುಗಿ. ಹನ್ನೊಂದು ವರ್ಷಗಳವರೆಗೆ ಅವಳೂ ಎಲ್ಲರ ಹಾಗೆ ಇದ್ದಳು. ಎಲ್ಲರಿಗೂ ಇಷ್ಟವಾಗುವಂತೆ ಮುದ್ದು ಮುದ್ದಾಗಿದ್ದಳು. ಅಪಾರ ಬುದ್ಧಿವಂತೆ. ಅದಮ್ಯ ಉತ್ಸಾಹ ಮತ್ತು ರಾಶಿ ಕನಸುಗಳೊಂದಿಗೆ ತನ್ನ ಗುರಿಯತ್ತ ಹೆಜ್ಜೆ ಇಡುತ್ತಿದ್ದಳು. ಆದರೆ ಒಂದು ಕಾರು ಅಪಘಾತ ಅವಳ ಉತ್ಸಾಹವನ್ನು ಬರಿದು ಮಾಡಿಬಿಟ್ಟಿತು. ಹನ್ನೊಂದು ವರ್ಷದ ಹುಡುಗಿ ತನ್ನ ಎರಡೂ ಕಾಲುಗಳನ್ನು ಕಳೆದುಕೊಂಡು ಪೂರಾ ಕುಗ್ಗಿ ಹೋದಳು. ಅದರಲ್ಲೂ ಅವನಿಗೆ 'ಪಾರಾಪ್ಲೇಜಿಯ' ಎಂಬ ಸ್ಥಿತಿ. ಬೆನ್ನು ಮೂಳೆಗೆ ತೀವ್ರ ಘಾಸಿ ಆಗಿ ಅವಳ ದೇಹದ ಒಂದು ಭಾಗದ ನಿಯಂತ್ರಣ ತಪ್ಪಿ ಹೋಗಿತ್ತು. ಹಾಗೆ ಸೊಂಟದ ಕೆಳಗಿನ ಭಾಗವು ಪೂರ್ತಿಯಾಗಿ ಜೀವ ಕಳೆದುಕೊಂಡಿತ್ತು. ಎಲ್ಲಾ ಕಡೆಗೂ ಅವನಿ ಅಮ್ಮ ಅವಳನ್ನು ಹೊತ್ತುಕೊಂಡು ಹೋಗಬೇಕಾದ ಅಸಹಾಯಕ ಪರಿಸ್ಥಿತಿ. ನಮಗೆಲ್ಲ ಊಹಿಸಿಕೊಳ್ಳುವುದು ಅಸಾಧ್ಯ. ಅಲ್ಲಿಗೆ ಅವನಿ ತನ್ನ ಬದುಕು ಮುಗಿದೇ ಹೋಯಿತು ಮತ್ತು ಕತ್ತಲು ಆವರಿಸಿಕೊಂಡಿತು ಎಂದುಕೊಂಡಳು. ಆದರೆ ಅವಳ ಬದುಕು ಮುಗಿದು ಹೋಗಲಿಲ್ಲ. ಅವನಿಯ ಅಪ್ಪ ಅವಳಿಗೆ ಒತ್ತಾಸೆಯಾಗಿ ನಿಂತರು. 'ನಿನಗೆ ಏನೂ ಆಗಿಲ್ಲ ನೀನು ಈಗಲೂ ಎಲ್ಲವನ್ನೂ ಮಾಡಬಲ್ಲೆ' ಎಂಬಂಥ ಆತ್ಮವಿಶ್ವಾಸವನ್ನು ತುಂಬಿದರು. ಸ್ವಲ್ಪ ದಿನಗಳ ನಂತರ ಅವನಿ ವ್ಹೀಲ್‌ಚೇರ್ ಮೇಲೆ ಕುಳಿತಳು. ಶಾಲೆಗೆ ಹೋದಳು. ಅವಳ ಸ್ನೇಹಿತರ್ಯಾರೂ ಹೀಯಾಳಿಸಲಿಲ್ಲ. ನಗಲಿಲ್ಲ. ಬದಲಾಗಿ ಪ್ರೀತಿ ತೋರಿದರು. ಹುರುಪು ತುಂಬಿದರು. ಸಾಧನೆಯತ್ತ ಕೈ ಹಿಡಿದು ನಡೆಸಿದರು. ಅಪ್ಪ ಮತ್ತು ಸ್ನೇಹಿತರ ಬೆಂಬಲದಿಂದ ಕಂಗಾಲಾಗಿದ್ದ ಅವನಿ ಮತ್ತೆ ಅರಳಿದಳು. ಎಲ್ಲವನ್ನೂ ಮರೆತಳು. ನೋವಿನಿಂದ ಆಚೆಗೆ ಬರಲು ಸಂಗೀತ ಮತ್ತು ಕ್ರೀಡೆಯನ್ನು ಆಯ್ಕೆ ಮಾಡಿಕೊಂಡಳು.

ಚಿನ್ನ ಗೆದ್ದ ದೇಶದ ಮಗಳಾದ ಅವನಿ: ಕಾರು ಅಪಘಾತಕ್ಕೂ ಮೊದಲು ಅವನಿ ಬಿಲ್ಲುಗಾರಿಕೆಯನ್ನು ಕಲಿಯುತ್ತಿದ್ದಳು. ಅಪಘಾತದ ನಂತರ ಶೂಟಿಂಗ್ ಕಲಿಯಲು ಆಸಕ್ತಿ ತೋರಿದಳು. ಸುಮಾ ಸಿದ್ಧಾರ್ಥ್ ಶಿರೂರು ಎಂಬ ತರಬೇತುದಾರರು ದೊರೆತರು. ಅವನಿ ಆರು – ಏಳು ವರ್ಷಗಳ ಕಾಲ ಕಠಿಣ ಹಾದಿಯಲ್ಲಿಯೇ ತರಬೇತಿ ಪಡೆದಳು. 2020ರ ಟೋಕಿಯೋ ಪಾರಾ ಒಲಂಪಿಕ್ಸ್‌ನಲ್ಲಿ ಭಾಗವಹಿಸಿ ಚಿನ್ನ ಗೆದ್ದಳು. ಪ್ಯಾರಾಲಿಂಪಿಕ್ ಕ್ರೀಡಾ ಕೂಟದಲ್ಲಿ ಚಿನ್ನದ ಪದಕ ಪಡೆದ ಮೊದಲ ಮಹಿಳಾ ಆಟಗಾರ್ತಿ ಎಂಬ ಹೆಗ್ಗಳಿಕೆಗೂ ಪಾತ್ರವಾದಳು. ಇಡೀ ದೇಶ ಬೆರಗಾಯಿತು. ಅವನಿ ಸಾಧನೆಯನ್ನು ಉಚ್ಚಕಂಠದಲ್ಲಿ ಹೊಗಳಿತು. ಎಲ್ಲವೂ ಮುಗಿದೇ ಹೋಯಿತು ಎಂದುಕೊಂಡ ಅವನಿ ಬದುಕಿನಲ್ಲಿ ವಿಸ್ಮಯ ನಡೆಯಿತು. ಅವಳು ಚಿನ್ನದ ಹುಡುಗಿಯಾದಳು.

**ಈ ಬಾರಿಯೂ ಚಿನ್ನ:** ಅವನಿ ಒಮ್ಮೆ ಚಿನ್ನ ಗೆದ್ದು ಸುಮ್ಮನಾಗಲಿಲ್ಲ. ಮತ್ತಷ್ಟು ಉತ್ಸಾಹದೊಂದಿಗೆ ನಿರಂತರವಾಗಿ ತರಬೇತಿ ಪಡೆದಳು. 2024ರ ಪ್ಯಾರಾ ಒಲಂಪಿಕ್ಸ್‌ನಲ್ಲೂ ಚಿನ್ನ ಗೆಲ್ಲುವ ಗುರಿ ಇಟ್ಟುಕೊಂಡಳು. ಅವಿರತ ಶ್ರಮದಿಂದ ಈ ಬಾರಿಯೂ ಪ್ಯಾರಿಸ್‌ನಲ್ಲಿ ನಡೆದ ಪ್ಯಾರಾಶ್ಯೂಟರ್ಸ್ ಸ್ಪರ್ಧೆಯಲ್ಲಿ ಫೈನಲ್ ಹಂತ ತಲುಪುವುದಕ್ಕೆ ಸೆಣಸಾಡಿದಳು. ಈ ಬಾರಿಯ ಸ್ಪರ್ಧೆಯ ಹಾದಿ ಅವನಿಗೆ ಸುಗಮವಾಗಿರಲಿಲ್ಲ. ಕೆಲ ತಿಂಗಳ ಹಿಂದೆ ತೀರಾ ಅನಾರೋಗ್ಯದ ಸಮಸ್ಯೆ ಪಿತ್ತಕೋಶದ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಅವನಿ ತೀರಾ ಕಷ್ಟ ಅನುಭವಿಸಿದ್ದಳು. ಆದರೂ ಛಲದಿಂದ ಕೊನೆಗೆ ಪ್ಯಾರಿಸ್‌ನಲ್ಲಿ ನಡೆದ ಪ್ಯಾರಾಲಿಂಪಿಕ್ 2024ನಲ್ಲಿ ಮಹಿಳೆಯರ 10 ಮೀಟರ್ Air Rifle Standing SH1 ವಿಭಾಗದ ಫೈನಲ್‌ನಲ್ಲಿ ಅವನಿ ಲೇಖರ ಚಿನ್ನದ ಪದಕ ಗೆದ್ದರು. 2ನೇ ಬಾರಿಗೆ ಅವನಿ ಚಿನ್ನದ ಪದಕ ಗೆದ್ದಿದ್ದಾರೆ.

ಆದರೆ ಈ ಬಾರಿ ಅವನಿಗೆ ಎರಡು ಚಿನ್ನದ ಪದಕ ಗೆಲ್ಲುವ ಆಸೆಯಿತ್ತು. ಏರ್ ರೈಫಲ್ ಸ್ಟ್ಯಾಂಡಿಂಗ್ ಎಸ್‌ಎಚ್1 ಸ್ಪರ್ಧೆಯಲ್ಲಿ ಐತಿಹಾಸಿಕ ಚಿನ್ನ ಜಯಿಸಿದ್ದ ಅವನಿ 50 ಮೀಟರ್ ರೈಫಲ್ 3ಪಿ ಎಸ್ ಎಚ್ ವಿಭಾಗದಲ್ಲಿ ಐದನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡು ಟೋಕಿಯೋ ಗೇಮ್ಸ್‌ನಲ್ಲಿ ಗೆದ್ದ ಕಂಚಿನ ಪದಕವನ್ನು ಉಳಿಸಿಕೊಳ್ಳುವಲ್ಲಿ ವಿಫಲರಾದರು. ಎರಡು ಪದಕಗಳನ್ನು ಗೆಲ್ಲುವ ಅವರ ಕನಸು ಭಗ್ನಗೊಂಡಿತು. ಇಷ್ಟಕ್ಕೆಲ್ಲ ಅವನಿ ಕುಸಿಯುವವರಲ್ಲ.



"ನನ್ನ ದೇಶಕ್ಕಾಗಿ ನಾನು ಚಿನ್ನ ಗೆಲ್ಲಲು ಸಾಧ್ಯವಾಯಿತು ಎಂದು ನನಗೆ ಸಂತೋಷವಾಗಿದೆ. ಇದು ದೇಶದ ಇತರೆ ಮಹಿಳೆಯರಿಗೆ ಅಡೆತಡೆಗಳನ್ನು ಮುರಿದು, ಮಹಿಳೆಯರು ಸಹ ಚಿನ್ನವನ್ನು ಗೆಲ್ಲಬಹುದು ಎಂಬ ಆತ್ಮವಿಶ್ವಾಸವನ್ನು ತುಂಬುತ್ತದೆ ಎಂದು ಭಾವಿಸುತ್ತೇನೆ. ಅದನ್ನು ಸಾಧಿಸಲು ನಾನು ಮೊದಲಿಗಳಾಗಿದ್ದೇನೆ ಎಂಬುದಕ್ಕೆ ನಾನು ಕೃತಜ್ಞಳಾಗಿದ್ದೇನೆ." – ಅವನಿ ಲೇಖರ

ಚಿನ್ನ ಗೆಲ್ಲುವುದು ಅವನಿಗೆ ಕಷ್ಟವೂ ಅಲ್ಲ. ಬದುಕಿನ ಅಗ್ನಿದಿವ್ಯವನ್ನು ಹಾದು ಬಂದಿರುವ ಅವನಿ ಅವರಲ್ಲಿ ಈಗಲೂ ಚಿಮ್ಮುವ ಉತ್ಸಾಹವಿದೆ. ಅವರು ಬದುಕಿನುದ್ದಕ್ಕೂ ಗೆಲ್ಲುತ್ತಲೇ ಇರುತ್ತಾರೆ. ಅವನಿ ನಮಗೆ ಮತ್ತು ನಮ್ಮ ಮನೆಯ ಮಕ್ಕಳಿಗೆ ಸ್ಫೂರ್ತಿಯಾಗಲಿ ಅಷ್ಟೇ. ಕೊರಗಿ ಕೂರುವ ಎಷ್ಟೋ ಜನರಿಗೆ ಅವನಿ ಉತ್ಸಾಹ ತುಂಬುವ ಆದರ್ಶವಾಗಲಿ.

ಪುಂಗವ PUNGAVA
# 74, Ranga Rao Road, Shankarapuram, Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th SEPTEMBER 2024
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 15-09-2024



# ಜಾತಿ ಗಣತಿಯ ದತ್ತಾಂಶಗಳು ಕ್ಷೇಮಾಭಿವೃದ್ಧಿಗೆ ಬಳಕೆಯಾಗಬೇಕೇ ಹೊರತು ಚುನಾವಣೆ–ರಾಜಕೀಯ ಲಾಭಕ್ಕೆ ದುರ್ಬಳಕೆಯಾಗಬಾರದು: ಸುನಿಲ್ ಅಂಬೇಕರ್

## ಆರ್‌ಎಸ್‌ಎಸ್ ಅಖಿಲ ಭಾರತೀಯ ಸಮನ್ವಯ ಬೈಠಕ್ ಸಂಪನ್ನ

ಪಾಲಕ್ಕಾಡ್, ಕೇರಳ: ಆಗಸ್ಟ್ 31 ರಿಂದ ಸೆಪ್ಟೆಂಬರ್ 2ರವರೆಗೆ ಕೇರಳದ ಪಾಲಕ್ಕಾಡಿನಲ್ಲಿ ನಡೆದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಸಮನ್ವಯ ಬೈಠಕ್ ಸಂಪನ್ನಗೊಂಡಿದೆ. ಬೈಠಕ್‌ನ ಕೊನೆಯ ದಿನ ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಪ್ರಚಾರ ಪ್ರಮುಖ್ ಸುನೀಲ್ ಅಂಬೇಕರ್ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಅಖಿಲ ಭಾರತೀಯ ಸಮನ್ವಯ ಬೈಠಕ್ ಕುರಿತು ಪಾಲಕ್ಕಾಡಿನ ಅಹಲ್ಯಾ ಕ್ಯಾಂಪಸ್ ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಹಿಂದೂ ಸಮಾಜಕ್ಕೆ ಜಾತಿ ಸಂಬಂಧಿತ ಅಂಶಗಳು ಸೂಕ್ಷ್ಮವಿಚಾರಗಳು. ಹಿಂದುಳಿದ ನಿರ್ದಿಷ್ಟ ಸಮುದಾಯ ಅಥವಾ ಜಾತಿಗಳ ಏಳಿಗೆಗೆ ಕಲ್ಯಾಣ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಸರಕಾರಕ್ಕೆ ದತ್ತಾಂಶಗಳ ಅಗತ್ಯವಿದೆ. ಈ ಜಾತಿ ಗಣತಿಯ ದತ್ತಾಂಶಗಳು ಕಲ್ಯಾಣ ಕಾರ್ಯಕ್ರಮಗಳಿಗೆ ಬಳಕೆಯಾಗಬೇಕೇ ಹೊರತು ಚುನಾವಣೆ ಲಾಭಕ್ಕೆ ದುರ್ಬಳಕೆಯಾಗಬಾರದು. ನಮ್ಮ ರಾಷ್ಟ್ರೀಯ ಏಕತೆ ಮತ್ತು ಸಮಗ್ರತೆಗೆ ಇದು ಮುಖ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಪುಣ್ಯಶ್ಲೋಕ ಅಹಲ್ಯಾದೇವಿ ಹೋಳ್ಕರ್ ಅವರ 300ನೇ ಜಯಂತಿಯ ಪ್ರಯುಕ್ತ ರಾಷ್ಟ್ರಾದ್ಯಂತ ಆಯೋಜಿಸಲಾದ ಮಹಿಳಾ ಸಮ್ಮೇಳನಗಳ ಕುರಿತು ಅಧಿಕೃತ ಮಾಹಿತಿ ಸಭೆಯಲ್ಲಿ ದೊರಕಿತು. ದೇಶಾದ್ಯಂತ ಒಟ್ಟು 472 ಮಹಿಳಾ ಸಮ್ಮೇಳನಗಳು ನಡೆದಿದ್ದು, 5,75,740 ಮಹಿಳೆಯರು ಭಾಗವಹಿಸಿದರು. ರಾಷ್ಟ್ರದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ, ಮಹಿಳಾ ಕೇಂದ್ರಿತ ಸವಾಲುಗಳಿಗೆ ಪರಿಹಾರಗಳು, ಸ್ಥಾನೀಯ ಸವಾಲುಗಳು, ಭಾರತೀಯ ಚಿಂತನೆಯಲ್ಲಿ ಮಹಿಳೆ ಇತ್ಯಾದಿ ವಿಷಯಗಳ ಕುರಿತು ಚರ್ಚಿಸಲಾಯಿತು. ಹಾಗೆಯೇ ಅಹಲ್ಯಾದೇವಿ ಹೋಳ್ಕರ್ ಅವರ ತ್ರಿಶತಾಬ್ದಿ ಜಯಂತಿಯ ಪ್ರಯುಕ್ತ ವಿವಿಧ ಸಂಘಟನೆಗಳು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ವನವಾಸಿ ಕಲ್ಯಾಣಾಶ್ರಮದ ನೇತೃತ್ವದಲ್ಲಿ ರಾಣಿ ದುರ್ಗಾವತಿಯ 500ನೇ ಜಯಂತಿಯನ್ನು ಆಚರಿಸಲಾಗುತ್ತದೆ ಎಂದು ನುಡಿದರು.




ಬೈಠಕ್‌ನಲ್ಲಿ ಪಶ್ಚಿಮ ಬಂಗಾಳದಲ್ಲಿ ನಡೆದ ವೈದ್ಯಕೀಯ ವಿದ್ಯಾರ್ಥಿನಿಯ ಅತ್ಯಾಚಾರವನ್ನು ಖಂಡಿಸಿ ಐದು ವಿಧದಲ್ಲಿ ಇಂತಹ ಘಟನೆಗಳನ್ನು ಎದುರಿಸಲು ತೀರ್ಮಾನಿಸಲಾಗಿದೆ. ಕಾನೂನಾತ್ಮಕ ಹೋರಾಟ, ಜಾಗೃತಿ ಕಾರ್ಯಕ್ರಮಗಳು, ಕುಟುಂಬಗಳಲ್ಲಿ ಸಂಸ್ಕಾರ ಪ್ರದಾನ, ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣದ ಮೂಲಕ ಜಾಗೃತಿ, ಶಾಲಾ, ಕಾಲೇಜು ಮತ್ತು ಕೆಲಸದ ಸ್ಥಳಗಳಲ್ಲಿ ಹೆಣ್ಣು ಮಕ್ಕಳಿಗೆ ಆತ್ಮರಕ್ಷಣೆಯ ತರಬೇತಿಗಳನ್ನು ನೀಡುವ ವ್ಯವಸ್ಥೆಯನ್ನು ರೂಪಿಸುವುದರ ಮೂಲಕ ಇಂತಹ ಆಘಾತಕಾರಿ ಘಟನೆಗಳನ್ನು ಗಂಭೀರವಾಗಿ ಪರಿಗಣಿಸಿ ಸಂಘ, ಸಂಘ ಪ್ರೇರಿತ ಸಂಘಟನೆಗಳ ಮೂಲಕ ಇದರ ಕುರಿತು ಕಾರ್ಯನಿರ್ವಹಿಸಲಾಗುತ್ತದೆ ಎಂದರು.

ಮೂರು ದಿನಗಳ ಕಾಲ ನಡೆದ ಈ ಬೈಠಕ್‌ನಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ. ಮೋಹನ್ ಭಾಗವತ್, ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ಎಲ್ಲಾ ಆರು ಮಂದಿ ಸಹಸರಕಾರ್ಯವಾಹರುಗಳು ಮತ್ತು 32 ಸಂಘಟನೆಗಳ ರಾಷ್ಟ್ರೀಯ ಪ್ರಮುಖರು ಸೇರಿದಂತೆ 300 ಮಂದಿ ಪ್ರಮುಖರು ಭಾಗವಹಿಸಿದರು.

# ಗ್ರಾಮೀಣ ಆರ್ಥಿಕತೆ ಗಟ್ಟಿಗೊಳಿಸಿದ ಜನ್ ಧನ್

ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಜನ್ ಧನ್ ಯೋಜನೆ(ಪಿಎಂಜೆಡಿವೈ) ಹತ್ತು ವರ್ಷಗಳನ್ನು ಪೂರೈಸಿದೆ. ಈ ಹಿಂದೆ ಬ್ಯಾಂಕ್ ಖಾತೆ ಹೊಂದುವುದು ಎಲ್ಲರಿಗೂ ಸಾಧ್ಯವಿಲ್ಲದ ಸಂಗತಿಯಾಗಿತ್ತು. ಆದರೆ, ಈ ಯೋಜನೆಯಲ್ಲಿ, ಕೇಂದ್ರ ಸರ್ಕಾರವು ದೇಶದ ಪ್ರತಿಯೊಂದು ವರ್ಗವನ್ನು ಬ್ಯಾಂಕಿಂಗ್ ವ್ಯವಸ್ಥೆಯೊಂದಿಗೆ ಜೋಡಿಸಲು ಪ್ರಯತ್ನಿಸಿದೆ. ಕಳೆದ 10 ವರ್ಷಗಳಲ್ಲಿ ದೇಶದಲ್ಲಿ 53.13 ಕೋಟಿಗೂ ಹೆಚ್ಚು ಪಿಎಂಜೆಡಿವೈ ಖಾತೆಗಳನ್ನು ತೆರೆಯಲಾಗಿದೆ. 2014ರ ಆಗಸ್ಟ್ 28ರಂದು ಪ್ರಾರಂಭವಾದ ಯೋಜನೆಯು ಮಹಿಳೆಯರನ್ನು ಆರ್ಥಿಕ ವ್ಯಾಪ್ತಿಗೆ ತರಲು ಬುನಾದಿಯಾಗಿ ಪರಿಣಮಿಸಿದೆ.

ಸರ್ಕಾರದ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ 2014ರ ಆಗಸ್ಟ್ 28ರಂದು ಪ್ರಧಾನ ಮಂತ್ರಿ ಜನ್ ಧನ್ ಯೋಜನೆ (ಪಿಎಂಜೆಡಿವೈ) ಜಾರಿಗೆ ತರಲಾಯಿತು. ಅಲ್ಲಿಯವರೆಗೆ ಬ್ಯಾಂಕ್ ಖಾತೆ ಹೊಂದುವುದು ಸೀಮಿತ ವರ್ಗಕ್ಕಷ್ಟೇ ಸಾಧ್ಯ ಎಂಬ ಮಾತಿತ್ತು. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರು 2014ರಲ್ಲಿ ದೇಶದ ಪ್ರತಿಯೊಬ್ಬ ವ್ಯಕ್ತಿಯೂ ಬ್ಯಾಂಕ್ ಖಾತೆ ಹೊಂದಿರಬೇಕೆಂಬ ಉದ್ದೇಶದಿಂದ ಜನ್ ಧನ್ ಖಾತೆಗೆ ಚಾಲನೆ ನೀಡಿದರು. ಕೇಂದ್ರದ ಮಹತ್ವಾಕಾಂಕ್ಷಿಯ ಯೋಜನೆಗಳಲ್ಲಿ ಒಂದಾದ ಪಿಎಂಜೆಡಿವೈ ಖಾತೆಗಳಲ್ಲಿ ಬೇರೆ ಬ್ಯಾಂಕ್ ಖಾತೆಗಳಂತೆ ಬ್ಯಾಲೆನ್ಸ್ ಕಾಯ್ದುಕೊಳ್ಳುವ ಅಗತ್ಯವಿಲ್ಲ. ಅಲ್ಲದೆ, ಈ ಖಾತೆಗೆ ಯಾವುದೇ ಶುಲ್ಕವನ್ನು ಸಹ ವಿಧಿಸಲಾಗುವುದಿಲ್ಲ. ಇದು ವಿಶ್ವದ ಅತಿದೊಡ್ಡ ಹಣಕಾಸು ಸೇರ್ಪಡೆ ಉಪಕ್ರಮವಾಗಿದ್ದು, 53.13 ಕೋಟಿಗೂ ಹೆಚ್ಚು ಫಲಾನುಭವಿಗಳೊಂದಿಗೆ ಯಶಸ್ವಿಯಾಗಿ ಒಂದು ದಶಕವನ್ನು ಪೂರ್ಣಗೊಳಿಸಿದೆ. ಯೋಜನೆಯು ಲಕ್ಷಾಂತರ ಜನರಿಗೆ ಅಗತ್ಯ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುವ ಮೂಲಕ ಆರ್ಥಿಕ ಸೇರ್ಪಡೆಯತ್ತ ಭಾರತದ ಪ್ರಯಾಣದಲ್ಲಿ ಒಂದು ಮೈಲಿಗಲ್ಲಾಗಿದೆ.

ಪ್ರಧಾನ ಮಂತ್ರಿ ಜನಧನ್ ಯೋಜನೆಯಲ್ಲಿ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೂ ಒತ್ತು ನೀಡಲಾಗಿದೆ. ಒಟ್ಟು ಖಾತೆದಾರರಲ್ಲಿ ಮಹಿಳಾ ಖಾತೆದಾರರ ಪ್ರಮಾಣ ಶೇ. 57ರಷ್ಟಿದೆ. ಕೇಂದ್ರ ಹಣಕಾಸು ಸಚಿವಾಲಯದ ಇತ್ತೀಚಿನ ದತ್ತಾಂಶದ ಪ್ರಕಾರ, 2024ರ ಆ. 14ರವರೆಗೆ ಪಿಎಂಜೆಡಿಯದ್ದ ಖಾತೆಗಳಲ್ಲಿ ಮಹಿಳೆಯರ ಖಾತೆಗಳ ಸಂಖ್ಯೆ 29.56 ಕೋಟಿಯಷ್ಟಿದೆ. ಇದರೊಂದಿಗೆ ಕಳೆದ ಒಂದು ದಶಕದಲ್ಲಿ ಮಹಿಳೆಯರು ಬ್ಯಾಂಕ್ ಖಾತೆ ಹೊಂದುವುದರಲ್ಲಿ ಜನಧನ್ ಯೋಜನೆ ಗಮನಾರ್ಹ ಉತ್ತೇಜನ ನೀಡಿದೆ.

ನಗರ ಪ್ರದೇಶಗಳಿಗೆ ಹೋಲಿಸಿದರೆ ಗ್ರಾಮೀಣ ಭಾಗದಲ್ಲಿ ಯೋಜನೆಗೆ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಅದರಂತೆ, ಸುಮಾರು ಶೇ. 66.6 (35.37 ಕೋಟಿ) ಖಾತೆಗಳನ್ನು ಗ್ರಾಮೀಣ ಮತ್ತು ಸಣ್ಣನಗರ ಪ್ರದೇಶಗಳಲ್ಲಿ ಫಲಾನುಭವಿಗಳು ಹೊಂದಿದ್ದಾರೆ. ಇವರಲ್ಲಿ ಮಹಿಳಾ ಖಾತೆದಾರರು ಶೇ.55.6 (29.56 ಕೋಟಿ) ರಷ್ಟಿದ್ದಾರೆ.

ಪಿಎಂಜೆಡಿವೈ 89.67 ಲಕ್ಷ ಪಿಒಎಸ್/ ಎಂಪಿಒಎಸ್ ಯಂತ್ರಗಳ ಸ್ಥಾಪನೆಯನ್ನು ಸಕ್ರಿಯಗೊಳಿಸಿದೆ. ಮಾತ್ರವಲ್ಲದೆ, ಯುಪಿಐನಂತಹ ಪಾವತಿ ವ್ಯವಸ್ಥೆಗಳನ್ನು ಪರಿಚಯಿಸಿದೆ. ಈ ಹಿನ್ನೆಲೆಯಲ್ಲಿ 2019ರ ಆರ್ಥಿಕ ವರ್ಷದಲ್ಲಿ 2,338 ಕೋಟಿಯಷ್ಟಿದ್ದ ಡಿಜಿಟಲ್ ವಹಿವಾಟು 2024ರ ಆರ್ಥಿಕ ವರ್ಷದಲ್ಲಿ 16,443 ಕೋಟಿಗಳಿಗೆ ಏರಿಕೆಯಾಗಲು ಸಹಾಯ ಮಾಡಿದೆ.

# ಭಾರತಕ್ಕೆ ಮುಸ್ಲಿಂ ಒಳನುಸುಳುವಿಕೆ ಹೆಚ್ಚಳ

ಗುವಾಹಟಿ: ಬಾಂಗ್ಲಾದೇಶದಲ್ಲಿನ ಅಶಾಂತಿಯಿಂದಾಗಿ ಈಶಾನ್ಯ ಗಡಿಗಳ ಮೂಲಕ ಭಾರತಕ್ಕೆ ಮುಸ್ಲಿಮರ ಒಳನುಸುಳುವಿಕೆ ಹೆಚ್ಚಾಗಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಹೇಳಿದ್ದಾರೆ. ಅಶಾಂತಿ ಶುರುವಾದಂದಿನಿಂದ ಅಸ್ಸಾನಲ್ಲಿ ಸುಮಾರು 50 ಮುಸ್ಲಿಂ ವಲಸಿಗರನ್ನು ಬಂಧಿಸಲಾಗಿದೆ, ಅವರನ್ನು ವಾಪಸ್ ಕಳುಹಿಸಲಾಗಿದೆ ಎಂದು ಸಿಎಂ ವಿವರಿಸಿದ್ದಾರೆ. ಹೆಚ್ಚಿನವರು ಜವಳಿ ಕೈಗಾರಿಕೆಗಳಲ್ಲಿ ಕೆಲಸ ಮಾಡಿದವರು ಮತ್ತು ಕೈಗಾರಿಕೆಗಳು ತಮ್ಮ ಕೆಲಸ ಸ್ಥಗಿತಗೊಳಿಸಿದ್ದರಿಂದ ಅಲ್ಲಿಂದ ಪಲಾಯನ ಮಾಡಿ ಬಂದಿದ್ದಾರೆ. ಬಾಂಗ್ಲಾದೇಶದ ಅಶಾಂತಿಯ ನಂತರ ಅಂದುಕೊಂಡಷ್ಟು ಪ್ರಮಾಣದಲ್ಲಿ ಅಸ್ಸಾಂಗೆ ಹಿಂದುಗಳು ಬಂದಿಲ್ಲ. ಅಂತಹ ಮೂವರು ವಲಸಿಗರನ್ನು ದಕ್ಷಿಣ ಅಸ್ಸಾಂನ ಕರೀಂಗಂಜ್‌ನಿಂದ ವಾಪಸ್ ಕಳುಹಿಸಲಾಗಿದೆ. ಅಕ್ರಮ ವಲಸಿಗರನ್ನು ಪತ್ತೆಹಚ್ಚಲು ಹೆಚ್ಚುವರಿ ಪೊಲೀಸ್ ಸಿಬ್ಬಂದಿ ನಿಯೋಜಿಸುತ್ತಿದ್ದೇವೆ. ಬಿಎಸ್‌ಎಫ್ ತ್ರಿಪುರಾ ಮತ್ತು ಮೇಘಾಲಯದಲ್ಲಿ ಒಳನುಸುಳುವಿಕೆ ವಿರುದ್ಧ ತನ್ನ ಕ್ರಮಗಳನ್ನು ಬಿಗಿಗೊಳಿಸಿದೆ ಎಂದರು.

# ಯುಪಿ: ದೇಶ ವಿರೋಧಿ ಪೋಸ್ಟ್‌ಗೆ ಶಿಕ್ಷೆ; ಸರ್ಕಾರಿ ಸ್ಕೀಂ ಉತ್ತೇಜನಕ್ಕೆ ಬಹುಮಾನ

ಲಖನೌ: ಉತ್ತರ ಪ್ರದೇಶದ ಯೋಗಿ ಆದಿತ್ಯನಾಥ್ ನೇತೃತ್ವದ ಬಿಜೆಪಿ ಸರ್ಕಾರ, ಹೊಸ ಸಾಮಾಜಿಕ ಮಾಧ್ಯಮ ನೀತಿಯನ್ನು ಜಾರಿಗೆ ತಂದಿದ್ದು, ಇದರಲ್ಲಿ ಸಾಮಾಜಿಕ ಜಾಲ ತಾಣಗಳಲ್ಲಿ ರಾಷ್ಟ್ರವಿರೋಧಿ ಪೋಸ್ಟ್‌ಗಳನ್ನು ಮಾಡುವವರಿಗೆ ಜೀವಾವಧಿ ಶಿಕ್ಷೆ ವಿಧಿಸುವ ಎಚ್ಚರಿಕೆ ನೀಡಿದೆ. ಇದರ ಜೊತೆಗೆ ಸರ್ಕಾರದ ಯೋಜನೆಗಳನ್ನು ಪ್ರಚಾರ ಮಾಡುವವರಿಗೆ ಬಹುಮಾನವನ್ನು ಪ್ರಕಟಿಸಿದೆ.

ಹೊಸ ನೀತಿ ಅನ್ವಯ ದೇಶ ವಿರೋಧಿ ಪೋಸ್ಟ್‌ಗೆ 3 ವರ್ಷದಿಂದ ಜೀವಾವಧಿವರೆಗೆ ಶಿಕ್ಷೆ ವಿಧಿಸಬಹುದಾಗಿರುತ್ತದೆ. ಜೊತೆಗೆ ಯಾವುದೇ ಸಂಸ್ಥೆಗಳು ಆಕ್ಷೇಪಾರ್ಹ, ಅಶ್ಲೀಲ ಪೋಸ್ಟ್ ಹಾಕಿದರೆ ಅವುಗಳ ವಿರುದ್ಧವೂ ಕಾನೂನು ಕ್ರಮಕ್ಕೆ ಅವಕಾಶ ಕಲ್ಪಿಸುತ್ತದೆ. ಇನ್ನು ಸರ್ಕಾರದ ಯೋಜನೆಗಳ ಪೋಸ್ಟ್ ಜನಪ್ರಿಯಗೊಳಿಸುವ ಜಾಲತಾಣ ಇನ್‌ಫ್ಲೂಯೆನ್ಸರ್‌ಗಳು ತಮ್ಮ ಹಿಂಬಾಲಕರು ಮತ್ತು ಚಂದಾದಾರರ ಸಂಖ್ಯೆ ಆಧಾರದ ಮೇಲೆ ಮಾಸಿಕ 2 – 8 ಲಕ್ಷ ರೂ. ಆದಾಯ ಪಡೆಯಬಹುದಾಗಿದೆ. ಎಕ್ಸ್, ಫೇಸ್‌ಬುಕ್, ಇನ್‌ಸ್ಟಾಗ್ರಾಮ್‌ನಲ್ಲಿ ಗರಿಷ್ಠ ಪಾವತಿ ಮಿತಿ ಕ್ರಮವಾಗಿ 5ಲಕ್ಷ ರೂ, 4 ಲಕ್ಷ ರೂ, 3 ಲಕ್ಷ ರೂ. ಗೆ ಮಿತಿಗೊಳಿಸಲಾಗಿದೆ. ಯುಟ್ಯೂಬ್‌ನಲ್ಲಿ ವಿಡಿಯೋ, ಕಿರುಚಿತ್ರ, ಪಾಡ್‌ಕಾಸ್ಟ್‌ಗಳ ಪಾವತಿ ಮಿತಿಯನ್ನು ಕ್ರಮವಾಗಿ 8 ಲಕ್ಷ ರೂ. 7 ಲಕ್ಷ ರೂ. 6 ಲಕ್ಷ ರೂ. ಮತ್ತು 4 ಲಕ್ಷ ರೂ.ಗೆ ಮಿತಿಗೊಳಿಸಿದೆ.

# ತಹಶೀಲ್ದಾರ್ ಆದೇಶಕ್ಕೆ ಹಿಂದೂ ಸಂಘಟನೆಗಳ ವಿರೋಧ 24 ತಾಸಲ್ಲೇ ಆದೇಶ ವಾಪಸ್!

ಗಂಗಾವತಿಯ ಜುಲೈನಗರದಿಂದ ಪ್ರತಾಪ್ ವೃತ್ತದವರೆಗೆ ಅಭಿವೃದ್ಧಿಪಡಿಸಿದ, ಅಂಜನಾದ್ರಿ ಪರ್ವತಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಮಧ್ಯೆ ಗಧೆ, ಬಿಲ್ಲು ಹಾಗೂ ಬಾಣದ ಚಿನ್ಹೆಯುಳ್ಳ ವಿದ್ಯುತ್ ಕಂಬ ಅಳವಡಿಸಿದ್ದನ್ನು ತೆರವುಗೊಳಿಸಲು ಹೊರಡಿಸಿದ್ದ ಆದೇಶವನ್ನು ತೀವ್ರ ವಿರೋಧದ ತರುವಾಯ ಗಂಗಾವತಿ ತಹಶೀಲ್ದಾರ್ ಹಿಂಪಡೆದಿದ್ದಾರೆ. ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ಸಂಸ್ಥೆ ವಿರುದ್ಧವೇ ಪ್ರಕರಣ ದಾಖಲಿಸುವಂತೆ ಸೂಚಿಸಿದ್ದಾರೆ.

ಆ.28ರ ಸಂಜೆ ಹೊರಡಿಸಿದ್ದ ಆದೇಶವನ್ನು ಹೊರಡಿಸಲಾಗಿತ್ತು. 24 ಗಂಟೆಯೊಳಗೆ ಆದೇಶವನ್ನು ಹಿಂಪಡೆದಿರುವ ತಹಶೀಲ್ದಾರ್ ನಾಗರಾಜ್ ಅವರು ಈ ಬಗ್ಗೆ ಸಂಬಂಧಿತ ಸಂಕ್ಷಮ ಪ್ರಾಧಿಕಾರದಲ್ಲಿ ಜನಾಭಿಪ್ರಾಯ ಪಡೆದು ಮುಂದುವರಿಯಲಾಗುವುದು. ಧಾರ್ಮಿಕ, ಮತೀಯ ಭಾವನೆಯಂತ ಸೂಕ್ಷ್ಮ ವಿಚಾರ ಉಂಟಾದಲ್ಲಿ ಕಾನೂನನಾತ್ಮಕ ಕ್ರಮ ಕೈಗೊಳ್ಳಲಾಗುವುದು ಎಂದು ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.